ಅಪ್ಪರ್ ಪ್ರಾವಿನ್ಸ್ ಆಸ್ಪಿಟಲ್‌ಗಳ ಇನ್ಸ್‌ಪೆಕ್ಟರ್ ಜನರಲ್ಲಾದ ಜಾನ್ ಮರೆ ಯಸ್ಕ್ವಯರ ಎಂ. ಡಿ. ಯೆಂಬವರಿಂದ ಬರಿಯಲ್ಪಟ್ಟ ಸನ್ ೧೮೬೭ನೇ ಇಸವಿಯಲ್ಲಿ ಹರಿದ್ವಾರದೊಳಗೆ ವುಂಟಾದ ಉಖಾಲ್ ಜುಲಾಬನ್ನು ಕುರಿತ ರಿಪೋರ್ಟು.

ಸನ್ ೧೮೬೭ನೇ ಇಸವಿಯಲ್ಲಿ ಹರಿದ್ವಾರದೊಳಗೆ ವುಂಟಾದ ಉಖಾಲ್ ಜುಲಾಬನ್ನು ಕುರಿತ ಸಂಗತಿಯಿಂದ ಸದರೀ ರೋಗದ ಕೇವಲ ಮುಖ್ಯವಾದ ಕೆಲವು ಲಕ್ಷಣಗಳು ವಿವರಿಸಲ್ಪಡುವದಲ್ಲದೆ ಅನೇಕ ನಿದರ್ಶನಗಳ ದೆಸೆಯಿಂದ ಕೇವಲ ಮುಖ್ಯವಾದ ಕೆಲವಂಶಗಳು ಸಿದ್ಧಯಿಸಲ್ಪಡುತ್ತವೆ. ಇಂಥಾ ಅಂಶಗಳನ್ನು ಕುರಿತು ಭಿನ್ನಾಭಿಪ್ರಾಯಗಳುಂಟಾಗಿವೆ.

ಈ ರೋಗ ವುಂಟಾಗುವದೆಂಬದಾಗಿ ಸೂಚನೆ ತೋರಬಂದ ಕೂಡ್ಲೆ ಅದು ವುಪೇಕ್ಷಿಸಲ್ಪಡಲಿಲ್ಲವು. ಮತ್ತು ಆ ರೋಗ ವುಂಟಾಗದೆ ನಿರೋಧಿಸುವ ಬಗ್ಗೆ ಕೆಲವು ವುಪಾಯಗಳು ಮಾಡಲ್ಪಟ್ಟವು. ರೋಗ ವುಂಟಾದಾಗ ರೋಗ ತಗಲಿದ ಯಾತ್ರೆಯ ಜನಗಳಿಗೆ ವಾಸಿ ಮಾಡುವ ಬಗ್ಗೆ ಅವರು ಯಾವ ಪ್ರದೇಶದಲ್ಲಿ ಸಾಗಿ ಹೋಗುತ್ತಾರೋ ಆ ದೇಶದಲ್ಲಿಯೂ, ಯಾವ ಸ್ಥಳಕ್ಕೆ ವಾಪಸು ಬರುತ್ತಾರೋ ಆ ಸ್ಥಳದಲ್ಲಿಯೂ, ಬಂದೋಬಸ್ತು ಮಾಡುವ ಬಗ್ಗೆ ಕೇವಲ ಪ್ರಸಿದ್ಧವಾಗಿ ಸಾಧ್ಯವಾಗಿರುವಂಥಾ ಉಪಾಯಗಳನ್ನು ಕೂಡ್ಲೆ ಮಾಡೋಣಾಯಿತು. ಈ ಸಂದರ್ಭದಲ್ಲಿ ವುಂಟಾದ ಅನುಭವವು ಇಂಡ್ಯಾ ದೇಶದಲ್ಲಿ ಮಾತ್ರವಲ್ಲದೇ ಲೋಕದಲ್ಲಿ ಯಾವ ದೇಶದಲ್ಲಿ ಉಖಾಲ್ ಜುಲಾಬ್ ಉಪದ್ರವ ರೂಢ ಮೂಲವಾಗಿದಿಯೋ, ಯಾವ ದೇಶದಿಂದ ಈ ರೋಗ ಪರಿಹಾರವಾಗುವದಾಗಿಲ್ಲವೋ ಮತ್ತು ಇಂಡ್ಯಾ ದೇಶದಂತೆ ಯಾವ ಯಾವಕಡೆ ಬಾರ್ ಬಾರ್ ರೋಗ ಕಾಣಿಸಿಕೊಳ್ಳುತ್ತೋ ಅಂಥಾ ದುಲ್ಲದೇಶಗಳೊಳಗೂ ವುತ್ತರೋತ್ತರ ಕೇವಲ ಪ್ರಯೋಜನಕರವಾಗಿರುವದು.

ಘುಮಾರು ಸ್ಕಾಟ್‌ಲ್ಯಾಂಡ್ ಸೀಮೆಯಲ್ಲಿರುವಷ್ಟು ಮಂದಿ ಪೂರ್ವ ಬಂಗಾಳೆ, ದಕ್ಷಿಣ ಇಂಡ್ಯಾ, ಪಶ್ಚಿಮ ಪಂಜಾಬ್ ಈ ಹಿಂದು ದೇಶಗಳಿಂದ ಬಂದು ಯೇಪ್ರೈಲ್ ೧೨ನೇ ತಾರೀಖಿನಲ್ಲಿ ಗಂಗಾತೀರದೊಳಗೆ ವೊಂದೇ ಮೈದಾನ ಪ್ರದೇಶದಲ್ಲಿ ಗುಂಪು ಸೇರಿದರು. ಆ ದಿನದಲ್ಲಿ ಆ ಬಹೀ ಸ್ನಾನ ವಗೈರೇ ಆದಬಳಿಕ ಜನಗಳು ತಮ್ಮ ತಮ್ಮ ಸ್ಥಳಗಳಿಗೆ ಹೊರಟು ಹೋದರು. ಮೂರನೇ ದಿನ ಸದರೀ ಸ್ಥಳ ಯಥಾ ಪ್ರಕಾರ ಖಾಲಿಯಾಯಿತು ಪಾದಚಾರಿಗಳಾಗಿಯೂ, ಬಂಡಿಗಳ ಮೇಲೂ, ವೊಂಟೆಗಳ ಮೇಲೂ, ಬಂದಿದ್ದ ಬಹು ಪ್ರಜೆಗಳು ಹರಿದ್ವಾರದಿಂದ ೮೦ ಮೈಲಿಗಳ ದೂರದಲ್ಲಿರುವ ಏರಾತ್ಮು ಆಚೆ ಯಿರುವ ಮಾರ್ಗದಲ್ಲಿ ಲಂದರ್ಬೀದಿಯಲ್ಲಿ ಜನಗಳು ಸಾಗುವಂತೆ ಘಮಾರ್ ವೊಂದು ಪಾರದ ದಂಗೆ ಸಾಗುತ್ತಾ ಯಿದ್ದರು.

ಪೂರ್ವ ಕಾಲದಲ್ಲಿ ಗಂಗೆಯು ವುತ್ಪತ್ತಿ ಸ್ಥಳವಾದ ಭದ್ರನಾಥ ಶಿಖರದ ಬಳಿ ಹಿಮ ಮಯವಾದ ಪ್ರದೇಶದೊಳಗೆ ಸ್ನಾನಘಟ್ಟ ಯೇರ್ಪಟ್ಟಿತ್ತು. ಈ ಭದ್ರನಾಥ ಶಿಖರವು ಹಿಮವತ್ಪರ್ವತದ ಶಿಖರಗಳ ಪೈಕಿ ವೊಂದಾಗಿರುತ್ತೆ. ಈಗಿನ ಕಾಲದಲ್ಲಿ ಹರಿದ್ವಾರವೆಂಬ ಸ್ಥಳದಲ್ಲಿ ಸ್ನಾನಘಟ್ಟ ಕಲ್ಪಿಸಿ ಯಿರುತ್ತಾರೆ ಆಬಳಿ ಗಂಗೆ ಪರ್ಯಂತದಲ್ಲಿ ದಾರಿಯಾಗಿ ಹಿಂದುಸ್ತಾನ ಸೀಮೆಯ ಮೈಲ್ ಪ್ರದೇಶದಲ್ಲಿ ವ್ಯಕ್ತವಾಗುತ್ತೆ. ಆಬಳಿ ಪ್ರತಿ ಸಂವತ್ಸರವೂ ಯೇಪ್ರೈಲ್ ೧೨ನೇ ತಾರೀಖಿನಲ್ಲಿ ವೊಂದು ದಿಲಾಯಾನಿ ಪರಷೆ ನಡೆಯುತ್ತೆ. ಇಂಥಾ ಪರಷೆಗಳ ಪೈಕಿ ೧೨ ಸಂವತ್ಸರಕ್ಕೊಂದಾವರ್ತಿ ಆಗತಕ್ಕ ಕುಂಬ ಕಾಮಿಲಾಯೆಂಬದು ಕೇವಲ ಮುಖ್ಯವಾದ್ದೆಂದು ಭಾವಿಸುತ್ತಾರೆ. ಗಂಗಾನದಿಗೆ ಕಾಲ್ವೆ ತೆಗದು ನೀರು ತಿರುಗಿಸಲ್ಪಟ್ಟದ್ದರಿಂದ ಹರಿದ್ವಾರದ ಮಹಿಮೆ ಹೋಯಿತೆಂತಲೂ ಅದರಿಂದ ಯಿದೇ ಕಡೇ ಕುಂಬ ಪರಷೆ ಯೆಂತಲೂ ವೊಂದು ಪ್ರವಾದ ಪ್ರಚುರಗೊಂಡಿತ್ತು. ರೇಯಿಲ್ ರಸ್ತೆ, ಯಿಲೆಕ್ಟ್ರಿಕ್ ಟೆಲಿಗ್ರಾಫ ವಿದ್ಯಾಭಿವೃದ್ಧಿ ಇವುಗಳಿಂದ ಯಿನ್ನೂ ಹತ್ತು ಹನ್ನೆರಡು ವರುಷಗಳ ಕಾಲದಲ್ಲಿ ಈ ತಾತ್ಪರ್ಯ ದೃಢವಾಗಿ ಇದು ನೆರವೇರುವದಕ್ಕೆ ಕಾರಣವಾಗುವದು ಯಿದು ಕೇವಲ ಅಪೇಕ್ಷಿತವಾಗಿರುತ್ತೆ. ಯಾತಕ್ಕೆಂದರೆ, ಜನಗಳ ಆರೋಗ್ಯವನ್ನು ಕುರಿತು ಪ್ರವರ್ತಿಸಿ ಯಿರುವ ಶಾಸ್ತ್ರದಲ್ಲಿ ಈಗ ವುಂಟಾಗಿರುವ ಜ್ಞಾನದ ದೆಸೆಯಿಂದ ತಿಳಿಯಬಂದಂಥಾ ವುಪಾಯಗಳು ಧಾರಾಳವಾಗಿ ವುಪಯೋಗಿಸಲ್ಪಟ್ಟು ಅದರಿಂದ ಪ್ರಾಯಶಃ ಪ್ರಯೋಜನ ವುಂಟಾದಾಗ್ಯೂ ಅಷ್ಟು ಜನಗಳು ಸೇರುವದರಿಂದ ಅವರುಗಳಲ್ಲಿಯೇ ಹುಟ್ಟಿದ ರೋಗದಿಂದ ಬಹಳ ರೋಗವೂ ಜನ ನಷ್ಟವೂ ವುಂಟಾದ್ದಲ್ಲದೆ ಅದರಿಂದ ನೂರಾರು ಮೈಲುಗಳ ದೂರದ ವರಿಗೆ ವ್ಯಾಪಿಸಿ ಸಾವಿರಾರು ಮಂದಿ ಮೃತ ಪಟ್ಟರು. ಹರಿದ್ವಾರದಲ್ಲಿ ೨೫ ಸಲೆ ಮೈಲುಗಳ ದೂರಕ್ಕೆ ಸಮವಾಗಿ ಗಿಡ ವಗೈರೇ ಯಿಲ್ಲದ ಮರಳುಳ್ಳ ಮೈದಾನಾಗಿರುವ ಪ್ರದೇಶದಲ್ಲಿ ಜನಗಳು ಯಿಳಿಯುವ ಸ್ಥಳ ಯಿರುತ್ತೆ. ಈ ಪ್ರದೇಶದಲ್ಲಿ ಕ್ರಮವಾಗಿ ಬೀದಿಗಳೂ ಸಂದಿಗಳು ವಿಂಗಡಿಸಿ ಅಂಗಡಿಗಳು ಕಲ್ಪಿಸಲ್ಪಟ್ಟಿರುತ್ತವೆ. ಅವುಗಳೊಳಗೆ ವಿಸ್ತಾರವಾಗಿ ವೊಳ್ಳೇ ಜಿನಿಸೀ ವಗೈರೇಗಳಿರುತ್ತವೆ ಆಬಳಿ ಗಂಗಾನದಿಯಿಂದ ಜಲ ಸಮೃದ್ಧಿಯುಂಟಾಗಿರುತ್ತೆ. ಮತ್ತು ಕೇವಲ ಖಂಡಿತವಾಗಿಯೂ ಸಫಲ ವಾಗಿಯೂ ನಗರ ವಿಚಾರಣೆ ಮಾಡಲ್ಪಡುತ್ತದೆ ಜನಗಳು ಡೇರೇಗಳಲ್ಲಿ ಅಥವಾ ಪರಿಶುದ್ಧವಾಗಿಯೂ ಸುಂದರವಾಗಿಯೂ ಯಿರುವ ಹುಲ್ಲು ಮನೆಗಳಲ್ಲಿ ವಾಸ ಮಾಡಿದರು ವ್ಯಾಪಾರಕ್ಕೋಸ್ಕರ ಬಹಳವಾಗಿ ಮುಸಲ್ಮಾನರು ಬಂದು

ಸೇರಿದರು. ಹಿಂದುಗಳಿಗೆ ಇದು ಯೆರಡನೇ ವುದ್ದೇಶ್ಯವಾಗಿರುತ್ತೆ ಮಾರ್ಚಿ ಆಪ್ರೈಲ್‌ನಲ್ಲಿ ಜನಗಳು ಬಂದು ಸೇರುವದಕ್ಕೆ ಷುರು ಮಾಡಿದರು ಯೇಪ್ರೈಲ್ ತಾರೀಖು ೩ರ ವರಿಗೆ ಪರಷೆ ಕ್ರಮವಾಗಿ ಷುರುವಾಗಲಿಲ್ಲವು ೧೨ನೇ ತಾರೀಖಾದ ಪ್ರಬಲವಾದ ಸ್ನಾನ ದಿನದ ಮಧ್ಯಾನ್ಹದೊಳಗೆ ಜನ ಸಂಖ್ಯೆ ಕ್ಷಿಪ್ರದಲ್ಲಿಯೇ ಹೆಚ್ಚಿತು. ಆಗ ಷುಮಾರು ಮುವತ್ತು ಲಕ್ಷ ಪ್ರಜೆಗಳು ಸೇರಿರಬಹುದಾಗಿ ಗಣಿಸಲ್ಪಟ್ಟಿತು ಆ ದಿನದ ತರುವಾಯ ಜನಗಳೆಲ್ಲಾ ಹೊರಟು ಹೋದರು. ೧೨ನೇ ತಾರೀಖಿನಲ್ಲಿ ಪೆಳಿಗ್ಯೆ ಆ ವಿಶಿಷ್ಟ ಪ್ರದೇಶವೂ, ಯೆರಡು ಮೂರು ದಿನಗಳ ಕೆಳಗೆ ಅಷ್ಟು ಜನಗಳು ಸೇರಿ ಯಿದ್ದಂಥಾದ್ದು ಯಥಾಪ್ರಕಾರ ಶುದ್ಧ ಮೈದಾನಾಯಿತು.

ಮಾರ್ಚಿ ಆಪ್ರೈಲ್‌ನಲ್ಲಿ ಹವಾ ಸ್ವಲ್ಪ ವುಷ್ಣವಾಗಿತ್ತು. ಆದರೆ ಕೆಲವು ದಿನ ಸ್ವಲ್ಪ ಮಳೆಯೂ, ಗಾಳಿಯೂ ವುಂಟಾಗಿ ಯೇಪ್ರೈಲ್ ೧೧ನೇ ತಾರೀಖಿನ ರಾತ್ರಿ ವರಿಗೆ ಹವಾ ಹಿತವಾಗಿಯೇ ಯಿತ್ತು. ಆಗ ಬಲವಾದ ಗಾಳಿಯೂ, ಮಳೆಯೂ ವುಂಟಾಗಿ ರಾತ್ರಿ ಯೆಲ್ಲಾ ಇದ್ದದ್ದಲ್ಲದೇ ೧೨ನೇ ತಾರೀಖಿನ ಮಧ್ಯಾನ್ಹದ ವರಿಗೆ ಇತ್ತು ೧ನೇ ನಂಬರ್ ಪಟ್ಟಿಯಲ್ಲಿ ಕಾಣಿಸಲ್ಪಟ್ಟಂತೆ ೧೪ ಡಿಕ್ರಿಗಳ ವರಿಗೆ ಹವಾವಿನ ಪ್ರಮಾಣ ಯಿಳಿಯಿತು ಆ ತಿಂಗಳ ಪೈಕಿ ವುಳಿದ ದಿನಗಳೆಲ್ಲಾ ವಿಶೇಷ ಮೇಘಾಕೃತವಾಗಿಯೂ ಮಳೆ ಬೀಳುತ್ತಲೂ ಯಿತ್ತು.

ಯೇಪ್ರೈಲ್ ೧೧ನೇ ತಾರೀಕ್ ವರಿಗೆ ಬಹು ಪ್ರಜೆಗಳಿಗೆ ವಿಶೇಷವಾಗಿ ಆರೋಗ್ಯ ವುಂಟಾಗಿದ್ದಂತೆ ನೌಕರಿ ಮೇಲಿದ್ದ ಮೆಡಿಕೆಲ್, ಸಿವಿಲ್, ಮತ್ತು ಮಿಲಿಟೇರಿ ಆಫಿಸರ್‌ಗಳು ತಿಳಿಸಿದ್ದರಿಂದಲೂ, ಆಸ್ಪಿಟೆಲ್ ರಿಪೋರ್ಟುಗಳಿಂದಲೂ, ಯಾತ್ರೆ ಜನಗಳ ಪೈಕಿ ಅನೇಕರನ್ನು ಮಿರಾರ್ ಬಳಿ ದಾರಿಯಲ್ಲಿ ನಾನು ಖುದ್ ವಿಚಾರಿಸಿದಾಗ ಅವರುಗಳು ಹೇಳಿದ್ದರಿಂದಲೂ ತಿಳಿಯ ಬಂತು. ೧೨ನೇ ತಾರೀಖಿಗೆ ಪೂರ್ವ ರೋಗೋಪದ್ರವವೇನೂ ಇಲ್ಲವೆಂದು ಇವರುಗಳೆಲ್ಲಾ ತಿಳಿಸಿ ಇರುತ್ತಾರೆ. ೧೨ನೇ ತಾರೀಖಿನ ಮಧ್ಯಾನ್ಹ ಸ್ನಾನವಾದ ಬಳಿಕ ಉಖಾಲ್ ಜುಲಾಬ್ ಕಾಣಿಸಿ ಕೊಂಡಿತು ಆ ದಿನ ಮಧ್ಯಾನ್ಹ ತ್ವರದಲ್ಲಿಯೂ ರಾತ್ರೆಯೂ ಕೆಲವರಿಗೆ ವುಪದ್ರವ ತಗಲಿತು ಆ ಮಾರನೇ ದಿನ ಯೆಂಟು ಮಂದಿ ಮಾತ್ರ ಆಸ್ಪಿಟಲ್‌ನಲ್ಲಿ ದಾಖಲ್ ಮಾಡಿ ಕೊಳ್ಳಲ್ಪಟ್ಟರು. ಈ ತಾರೀಖಿಗೆ ಹಿಂದೆ ವೊಬ್ಬ ಮೃತಪಟ್ಟಿರಬಹುದು ಹಾಗೆ ೪ ಮಂದಿ ಮೃತಪಟ್ಟಂತೆ ಪೊಲೀಸ್ ನವರು ರಿಪೋರ್ಟು ಮಾಡಿರುತ್ತಾರೆ. ಆದರೆ ಮೆಡಿಕೆಲ್ ಆಫಿಸರ್‌ಗಳು ಹೋಗಿ ಅಜಮಾಯಿಷಿ ಮಾಡುವಲ್ಲಿ ಅವರು ಉಖಾಲ್ ಜುಲಾಬ್‌ನಿಂದ ಮೃತಪಟ್ಟಂತೆ ಕಾಣಲಿಲ್ಲವು. ತಾರೀಖು ೯ರಲ್ಲು ಕ್ಯಾವಲ್‌ರಿ ಫಾಜಿನ ವೊಂದು ತುಕಡೀಗೆ ಸೇರಿದ ವೊಬ್ಬ ಹುಲ್ಲಿನವನಿಗೆ ಸ್ವಲ್ಪ ವುಪದ್ರವ ತಗಲಿತು ಯೇಪ್ರೈಲ್ ೩ನೇ ತಾರೀಕ್ ಲಾಗಾಯಿತು ೧೪ರ ವರಿಗೆ ಮೂರು ಆಸ್ಪಟಲ್‌ಗಳಲ್ಲಿ ೧೪೫೨ ಮಂದಿಗೆ ಚಿಕಿತ್ಸೆ ಮಾಡೋಣಾಯಿತು. ಈ ಪೈಕಿ ೧೯ ಮಂದಿ ಮೃತವಾದರು ಇದರಲ್ಲಿ ಇಬ್ಬರು ಅತಿಸಾರದಿಂದ ಹೋದರು ಆದರೆ ವೊಬ್ಬರು ಉಖಾಲ್ ಜುಲಾಬ್‌ನಿಂದ ಹೋಗಲಿಲ್ಲವು. ೧೧ನೇ ತಾರೀಖಿನಲ್ಲಿ ಸದರಿ ವುಪದ್ರವ ತೀವ್ರದದಶೆಯಲ್ಲಿಲ್ಲವೆಂಬದಕ್ಕೆಷ್ಟು ಮಾತ್ರವೂ ಸಂದೇಹವಿಲ್ಲವು. ೧೪ನೇ ತಾರೀಖಿನಲ್ಲಿ ವುಂಟಾಗಿತ್ತೆಂಬಲೂ ವಾಪಸ್ ಹೋಗುವಂಥಾ ಯಾತ್ರೆಯ ಜನಗಳಲ್ಲಿ ಪ್ರತಿ ಮನುಷ್ಯನಿಗೂ ಶೋಕಿಮಿಸಿ ಹಿಂದೊಡತೆಂತಲೂ ಸ್ಪಷ್ಟವಾಗಿ ತಿಳಿಯಲಾಯಿತು ಹರಿದ್ವಾರದಿಂದ ಯೆಲ್ಲಿ ಈ ವುಪದ್ರವ ವ್ಯಾಪಿಸಿತೋ ಅದನ್ನು ತಿಳಿಸುವದಕ್ಕಿಂತ ಮುಂದಾಗಿ ೧೨ನೇ ತಾರೀಖಿನಲ್ಲಿ ಈ ರೋಗ ಕಾಣಿಸಿಕೊಂಡ ವಿಷಯವನ್ನು ವಿಚಾರ ಮಾಡುವದು ಆವಶ್ಯಕವಾಗಿರುತ್ತೆ.

ವಾಯಾವ್ಯ ಶೀಮೆಯಲ್ಲಿಯೂ ಪಂಜಾಬ್ ನೊಳಗೂ ಛಳಿಗಾಲದಲ್ಲಾಗಲಿ, ಜೇಸಿಗೆಯ ಮೊದಲಾಗಲಿ, ಅಲಹಾಬಾದ್‌ನಲ್ಲಿ ಮಾಘಮಿಲಾ, ಹರಿದ್ವಾರಾಮಿಲಾ, ಕಳೆದ ಇಸವಿಯಲ್ಲಿ ಆಗ್ರಾ ಪಟ್ಟಣದೊಳಗೆ ನಡೆದ ದೊಡ್ಡ ದರಬಾರ್ ಈ ಮೇರೆ ಬಹು ಪ್ರಜೆಗಳು ಗುಂಪು ಸೇರುವ ಸಂದರ್ಭಗಳಲ್ಲಿ ವಿನಾ ಉಖಾಲ್ ಜುಲಾಬ್ ಉಪದ್ರವ ವ್ಯಾಪಿಸುವದಿಲ್ಲವು. ಆದರೆ ಸದರಿ ಸ್ಥಳದಲ್ಲಿ ವುಂಟಾದ ರೋಗವು ಪ್ರಾಯಶಃ ತದ್ದೇಶೀಯವಾಗಿತ್ತೇ ಹೊರ್ತು ಅಷ್ಟು ಸಾಂಕ್ರಾಮಿಕ ವಲ್ಲವು. ಆ ರೋಗ ತಗಲಿದವರು ವಾಪಸ್ ಬರುವಲ್ಲಿ ಅನೇಕರು ಸತ್ತು ಹೋಗುತ್ತಾ ಇದ್ದರು ಆದರೆ ಆ ಜನಗಳು ಯಾವ ಸ್ಥಳಗಳ ಮೇಲೆ ಹೋದರೋ ಆಯಾ ಸ್ಥಳದ ನಿವಾಸಿಗಳಿಗೆ ಮಾತ್ರ ಈ ರೋಗ ವಿಶೇಷವಾಗಿ ತಗಲಲಿಲ್ಲವು. ಹಿಮವತ್ಪರ್ವತದ ತಳದಲ್ಲಿ ತಿರೋಯಿ ಆರಣ್ಯದ ಪ್ರಾಂತದಲ್ಲಿರುವ ವೊಂದು ಪ್ರದೇಶದಲ್ಲಿ ವಿನಾ ಪಂಜಾಬ್ ಶೀಮೆಯ ಯಾವ ಭಾಗದಲ್ಲಾಗಲಿ ವಾಯಾವ್ಯ ಶೀಮೆಯುಗಳಲ್ಲಾಗಲಿ ಈ ಕಾಲದಲ್ಲಿ ಯಾವಾಗ್ಯೂ ಈ ಉಖಾಲ್ ಜುಲಾಬ್ ರೋಗ ವ್ಯಾಪಿಸಿದಂತೆ ಯೆಣಿಸುವದಕ್ಕೆ ಆಧಾರವಾಗಲಿ ಕಾರಣವಾಗಲಿ ಇಲ್ಲವು. ಫೆಬ್ರವರಿ ತಿಂಗಳಲ್ಲಿ ಉಖಾಲ್ ಜುಲಾಬ್ ವುಪದ್ರವ ನಿನಿಟಾಲ್ ಯೆಂಬ ಸ್ಥಳಕ್ಕೆ ಸಮೀಪದಲ್ಲಿ ತಿರೇಗ್ರಾಮಗಳಲ್ಲಿ ವ್ಯಾಪಿಸುತ್ತಾ ಮಾರ್ಚಿ ತಿಂಗಳಲ್ಲಿ ಪಶ್ಚಿಮ ಕಡೆಗೆ ಪರ್ವತಗಳ ಪ್ರಾಂತ್ಯದಲ್ಲಿ ವ್ಯಾಪಿಸಿತು. ಹರಿದ್ವಾರಕ್ಕೆ ಪೂರ್ವ ಕಡೆ ೬೦ ಮೈಲುಗಳ ದೂರದಲ್ಲಿರುವ ಭಾಬ್‌ಪೂರ್ ಯೆಂಬ ಗ್ರಾಮದಲ್ಲಿ ಯೇಪ್ರೈಲ್ ಮಾಹೇ ೫ನೇ ತಾರೀಕ್ ಲಾಗಾಯಿತು ೧೨ರ ವರಿಗೆ ೧೯ ಮಂದಿಗೆ ವುಪದ್ರವ ತಗಲಿತು ಸಂದೇಹವಿಲ್ಲದೆ ಈ ಸ್ಥಳದಿಂದಲೇ ಯಾತ್ರೆಯ ಜನಗಳು ಹರಿದ್ವಾರಕ್ಕೆ ಹೋದರು. ಮಾರ್ಚಿ ತಿಂಗಳಲ್ಲಿ ಕಾಶೀಯೊಳಗೆ ಉಖಾಲ್ ಜುಲಾಬ್ ವುಪದ್ರವ ವುಂಟಾಗಿತ್ತು ಮಾರ್ಚಿ ೨೪ರಲ್ಲಿ ಅಲಹಾಬಾದ್ ಬಳಿಯುಣ ಜೈಲ್‌ನಲ್ಲಿ ಕೆಲವರಿಗೆ ಸಾಂಕ್ರಾಮಿಕವಾಗಿ ತಗಲಿತು. ವಾಯಾವ್ಯ ಶೀಮೆ, ಪಂಜಾಬ್ ಈ ಶೀಮೆಗಳ ತಮಾಂ ಡಿಸ್ಟ್ರಿಕ್ಟುಗಳಿಂದಲೂ ಆಯಾ ಸ್ಥಳಗಳಿಂದಲೂ ಬಂದ ರಿಟರ್ನ್‌ಗಳಿಂದ ಯೇಪ್ರೈಲ್ ೧೨ಕ್ಕೆ ಪೂರ್ವವೂ ಹರಿದ್ವಾರದ ಯಾತ್ರೆಯ ಜನಗಳು ಬಂದ ತರುವಾಯವೂ ಅವರಲ್ಲಿ ಉಖಾಲ್ ಜುಲಾಬ್ ವುಪದ್ರವ ಇರಲಿಲ್ಲವೆಂದು ತಿಳಿಯ ಬರುತ್ತೆ. ಬಾಜುಪೂರ್ ಪ್ರಾಂತ್ಯದಿಂದ ರೋಗ ವ್ಯಾಪಿಸಿ ಬಂದಿದ್ದ ಪಕ್ಷಕ್ಕೆ ಹೊಳೆಯ ದಡದಲ್ಲಿ ಮೊಕ್ಕಾಮಿನ ಬಿಜಣೂರ್ ಪ್ರಾಂತ್ಯದಲ್ಲಿಯೇ ಪ್ರಾಯಶಃ ಮೊದಲು ಕಾಣಿಸಿಕೊಂಡಿರ ಬಹುದು. ಆ ಬಳಿ ತಿರೇ ಪ್ರಾಂತ್ಯದಿಂದ ಬಂದ ಯಾತ್ರೆಯ ಜನಗಳು ಸೇರಿದರು ಆದರೆ ಯೇಪ್ರೈಲ್ ತಾರೀಖು ೩ರ ಲಾಗಾಯತ್ ೧೪ರ ವರಿಗೆ ವೊಬ್ಬರಿಗೆ ಅತಿಸಾರೋಪದ್ರವ ತಗಲಿತೇ ಹೊರ್ತು ಉಖಾಲ್ ಜುಲಾಬ್ ವುಪದ್ರವ ವುಂಟಾಗಲಿಲ್ಲ. ಬಿಜನೂರು ಮೊಕ್ಕಾಮಿನಲ್ಲಿ ಡಾಕ್ಟರ್ ಗಾರ್ಡನರ್ ಯೆಂಬವರು ಸದರಿ

ಅತಿಸಾರಕ್ಕೆ ಚಿಕಿತ್ಸೆ ಮಾಡಿರುತ್ತಾರೆ. ಹರಿದ್ವಾರದಲ್ಲಿ ಉಪದ್ರವ ಕಾಣಿಸಿದ ದಿನ ಬೇರೆ ಬೇರೆ ಮಾರ್ಗವಾಗಿ ಹೊರಟು ಹೋದಂಥಾ ಯಾತ್ರೆಯ ಜನಗಳ ಪೈಕಿ ಪ್ರತಿ ಗುಂಪಿನವರಲ್ಲಿಯೂ ಯೇಕ ಕಾಲದಲ್ಲಿ ಉಬಾಲ ಜುಲಾಬ ಪ್ರಾರಂಭವಾದ್ದರಿಂದ ಒಂದು ಮಾರ್ಗವಾಗಿ ಈ ರೋಗ ವ್ಯಾಪಿಸುತ್ತಿತ್ತೆಂದು ಹೇಳುವದಕ್ಕಿಂತ ಸರ್ವವ್ಯಾಪಕವಾದ ಅಥವಾ ವಾಯುಗತವಾದ ದೋಷದಿಂದಲೇ ಹೆಚ್ಚಾಗಿ ಸಂಭವಿಸುತ್ತೆಂದು ತೋರುತ್ತೆ. ೧೧ನೇ ತಾರೀಖಿನ ರಾತ್ರೆಯೂ ೧೨ನೇ ತಾರೀಖಿನ ಹಗಲ್ಲಿಯೂ ಉಂಟಾದ ಗುಡುಗು ಮಿಂಚು ಪ್ರಬಲ ವೃಷ್ಟಿ ಇವುಗಳಿಗೂ ೧೨ನೇ ತಾರೀಖಿನ ಸಾಯಂಕಾಲ ಕಾಣಿಸಿಕೊಂಡ ರೋಗಕ್ಕೂ ಪ್ರತ್ಯಕ್ಷವಾದ ಸಂಬಂಧವಿತ್ತು. ಈ ಯೆರಡು ವಿಷಯಗಳಿಗೂ ಪ್ರಾಯಶಃ ಒಂದು ಸಂಬಂಧವಿರುತ್ತೆ, ಈ ಸಂಬಂಧ ಈಗ ಸ್ಪಷ್ಟವಿಲ್ಲದೇ ಇದ್ದಾಗ್ಯೂ ಇನ್ನು ಮೇಲಾದರೂ ಕಂಡು ಹಿಡಿಯಲ್ಪಡಬಹುದು. ಸನ್ ೧೮೮೫ನೇ ಇಸವಿ ಮಾರ್ಚಿ ತಿಂಗಳಲ್ಲಿ ಪಂಜಾಬು ಪಟ್ಟಣಗಳಲ್ಲಿ ಮುಸಲೇವ ಯೆಂಬ ಸ್ಥಳಕ್ಕೆ ಯಾತ್ರಾರ್ಥವಾಗಿ ಬಂದ ಜನಗಳಿಗೆ ತಗಲಿದ ಕ್ರೂರವಾದ ಸಹಾ ಉಪದ್ರವವು ಯಾವುದೋ ಸುರಿದ ಮಳೆಯಿಂದಲೇ ಉಂಟಾದ್ದಾಗಿ ಹೇಳುತ್ತಾರೆ. ಅಗ್ರಾ ಸಮೀಪದಲ್ಲಿ ಈ ಸಂವತ್ಸರ ಅಕಸ್ಮಾತ್ತಾಗಿ ಉಂಟಾದ ಮಳೆಗೂ ಉಬಾಲ ಜುಲಾಬ ಉಪದ್ರವಕ್ಕೂ ಪರಸ್ಪರ ಸಂಬಂಧವು ಸಮಾನವಾದ್ದಾಗಿರುತ್ತೆ. ಮೇ ೨೯ನೇ ತಾರೀಖಿನಲ್ಲಿ ಸಿಕಂದ್ರಾ ಯೆಂಬ ಸ್ಥಳದ ಅಮಿನೇ ಜಾಯಾನೀ ಅನಾಥ ಹುಡುಗರ ಶಾಲೆಯ ಹುಡುಗರು ಹೊರಗೆ ತಿರುಗಾಡುವದಕ್ಕಾಗಿ ಹೋದಾಗ ಅಕಸ್ಮಾತ್ ಬಲವಾದ ಮಳೆ ಬಂದು ನೆನದರು, ಆ ರಾತ್ರೆಯೂ ಆ ಮಾರನೇ ಯೆರಡು ದಿವಸಗಳಲ್ಲಿ ೧೬೪ ಮಂದಿ ಹುಡುಗರ ಪೈಕಿ ೩೦ ಮಂದಿಗೆ ವಾಂತಿ ಭೇದಿ ತಗಲಿತು. ಆ ತರುವಾಯ ೬ ದಿನಗಳಲ್ಲಿ ಮತ್ತು ೧೪ ಮಂದಿಗೆ ತಗುಲಿದರೂ ದೊಡ್ಡವರಾದ ಯಾರಿಗೂ ಉಪದ್ರವ ತಗಲಲಿಲ್ಲವು ಇತರ ಓರ್ಫ್ಯಾನೇಜು ಅಂದರೆ ೧೨೯ ಮಂದಿ ಕ್ರಿಸ್ತ್ಯಯನ್ ಹುಡುಗೀರೂ ೬೪ ಮಂದಿ ಹುಡುಗರೂ ಕೂಡ್ಲೆ ಆ ಸ್ಥಳದಿಂದ ಆಚೆಗೆ ಸಾಗಿಸಲ್ಪಟ್ಟರು ಆ ಪರಿಗಳ ಪೈಕಿ ಯಾರಿಗೂ ರೋಗ ತಗಲಲಿಲ್ಲವು. ಮೇ ತಿಂಗಳು ೨೯ರಲ್ಲು ಪೇಷಾವರಿನಲ್ಲಿ ಬಲವಾದ ಮಳೆಗಾಳಿ ಉಂಟಾಗಿ ೩೦ನೇ ತಾರೀಖ ಪ್ರಾತಃ ಆ ಪಟ್ಟಣದಲ್ಲಿದ್ದ ಯುರೋಪಿಯನ್ ಫೌಜಿನವರಲ್ಲಿ ಬಹು ಜೋರಾಗಿ ರೋಗ ತಗುಲಿದ ತರುವಾಯ ಯೆರಡು ದಿನಗಳಿಗೆ ಪೇಷಾವರ ಷಹರಲ್ಲಿ ತಗಲಿತು. ಮೇ ತಿಂಗಳು ೧೪–೧೮ ತಾರೀಖುಗಳಲ್ಲಿ ಮೊದಲನೆ ಮಳೆ ಬಿತ್ತು ಅಗ್ಯೆ ಅದು ಅಕಾಲ ವರ್ಷವು ಮೇ ೧೮ರಲ್ಲು ಪೇಷಾವರ ಮಾರ್ಗವಾಗಿ ಹರಿದ್ವಾರದಿಂದ ಯಾತ್ರೆಯ ಜನಗಳು ಕೆಲವು ಗುಂಪಿನವರು ಹೊರಟು ಹೋದರು.

ಈಚೆಗೆ ಉಪದ್ರವ ತಗಲಿಯಿದ್ದ ರಿಜಿಮೆಂಟುಗಳು ಮೊಕ್ಕಾಂ ಮಾಡಿಯಿದ್ದ ಸ್ಥಳದಲ್ಲಿ ಫೌಜಿನವರ ಪೈಕಿ ಈ ಉಬಾಲ ಜುಲಾಬ ಉಪದ್ರವ ತಗಲಿದ ಸಂಗತಿಯಲ್ಲಿ ಅನೇಕ ನಿವೇದನೆಗಳು ಯಿರುತ್ತವೆ. ಹಿಂದಿನ ವರುಷ ಯಾವ [illegible]ಗಳಲ್ಲಿ ಉಬಾಲ ಜುಲಾಬ ತಗಲಿದವರು ಚಿಕಿತ್ಸೆಗೋಸ್ಕರ ಸೇರಿಯಿದ್ದರೋ ಅವುಗಳಲ್ಲಿ ಪುನಃ ರೋಗ ಹುಟ್ಟುವಂತೆ ತಿಳಿಯಲಾಯಿತು. ಅಗ್ರಾಪಟ್ಟಣದೊಳಗೆ ಬರುಸಲ ಸಂಭವಿಸಿದ ಸಾಂಕ್ರಾಮಿಕ ಉಪದ್ರವವನ್ನು ನಾನು ವಿಚಾರಣೆಮಾಡಿದ್ದರಲ್ಲಿ ಮಳೆ ಬಂದ ಷುಮಾರ್ ಮೂರು ವಾರಗಳ ತರುವಾಯ ಉಪದ್ರವ ಪ್ರಾರಂಭಿಸಿತು ಸದರೀ ಕಾಲಗಳಲ್ಲಿ ಸಿಕಂದ್ರಾ ಯೆಂಬ ಸ್ಥಳದ ಅನಾಥ ಬಾಲಕರ ಶಾಲೆಯಲ್ಲಿ ಉಪದ್ರವ ತಗಲಿತು ಸದರೀ ಉಪದ್ರವ ಪ್ರಾರಂಭವಾದಾಗಲೆಲ್ಲ ಅಲ್ಲಿನ ಫೌಜಿನವರೂ ಖೈದಿಗಳೂ ಸಹಾ ಅಲ್ಲಿಗೆ ಸಮೀಪದಲ್ಲಿರುವ ಲಕ್ ಗೋಲಿಯಲ್ಲಿ ಯಿರುತ್ತಿದ್ದರು. ಸಿಕಂದ್ರಾ ಅನಾಥಾಲಯದ ಶಾಲೆಯಲ್ಲಿ ಉಪದ್ರವ ತಗಲಿದ ಸಂಗಡಲೇ ಉಬಾಲ ಜುಲಾಬ ರೋಗಕ್ಕೆ ಮೂಲವು ಭೂಮಿಯಲ್ಲಿ ಅಡಗಿ ಯಿದ್ದ ಮಳೆ ಬೀಳು [illegible] ಪ್ರಕಟವಾಗಿ ವ್ಯಾಪಿಸಿತೆಂತಲೂ ಯೋಚಿಸುತ್ತೆ.

ಬಹುಕಾಲಕ್ಕೆ ಪೂರ್ವ ಅಂದರೆ ೧೮೬೭ನೇ ಇಸವಿಯಲ್ಲಿಯೂ, ಆಮೇಲೆ ೧೮೭೯, ೧೮೮೯, ೧೮೭೪, ೧೮೭೬ ಈ ಇಸವಿಗಳಲ್ಲಿಯೂ ಹರಿದ್ವಾರದೊಳಗೆ ಬಹಳ ಜೋರಾಗಿ ಉಬಾಲ ಜುಲಾಬ ರೋಗ ಉಂಟಾದಂತೆ ದಾಖಲೆ ಇದೆ. ಸದರೀ ಬಾರಿಯು [illegible] ಈಚೆಗೆ ಅಂದರೆ ಹತ್ತು ವರುಷಗಳಿಂದ ಈ ಉಪದ್ರವ ತಗಲಿಲ್ಲ. ೧೮೭೯ನೇ ಇಸವಿಯಲ್ಲಿ ಹರಿದ್ವಾರದೊಳಗೆ ಉಬಾಲ ಜುಲಾಬ ಸಂಭವಿಸಿದ್ದಕೆ ಈ ಸಂವತ್ಸರ ಪ್ರಾರಂಭಿಸಿದ್ದಕೆ ಸದರೀ ೧೧ನೇ ತಾರೀಖಿನ ರಾತ್ರಿ ಬಿದ್ದ ಮಳೆಯಿಂದ ಉಪದ್ರವ ವ್ಯಾಪಿಸುವದಕ್ಕೆ ಕಾರಣವಾಯಿತೆಂದು ಹೇಳಬಹುದು. ಅನುಕೂಲಕರವಾದ ವಿದ್ಯಮಾನಗಳ ಬೆಂಬಲದಿಂದ ಪ್ರಬಲಕ್ಕೆ ಬಾರದೇ ಯಾವ ಕಾಲದಲ್ಲಿ ಅಡಗಿರುತ್ತೋ ಅದು ತಿಳಿಯಲಿಲ್ಲವು.

[illegible]ದಲ್ಲಿ ಉಂಟಾದ ರೋಗದ ಮೂಲವು ಪ್ರತ್ಯಕ್ಷವಾದ್ದು ಮಳೆಬಿದ್ದುದರಿಂದ ಹರಿದ್ವಾರದಲ್ಲಿ ಈಸಲ ನಡೆದ ಸಂಗತಿಯು ಬಹು ವಿಶೇಷವಾಗಿ ಸೇರಿದ ಜನಗಳ ಸಮೂಹದಲ್ಲಿ ಸ್ಪಷ್ಟವಾಗಿ [illegible]ವೆಂಬ ಸಂಗತಿಯನ್ನು ಅಪೇಕ್ಷಿಸುವದಕ್ಕೆ ಪ್ರಾಬಲ್ಯವಾದ ಕಾರಣವೇನೂ ಇಲ್ಲವು. ಈ ರೋಗವು ಕೆಲವು ಕಾಲಗಳ ಹೊತ್ತು ಕಡಾಚಿತು ಮೂರು ನಾಲ್ಕು ದಿವಸಗಳೂ ಈ ಮೇರೆ ಸ್ಥಳದಲ್ಲಿ ವ್ಯಾಪಿಸುತ್ತದೆ. ಅವರ ನಾಲ್ಕು ದಿನಗಳ ನಿಂತು ಬಹಳವಾಗಿ ಇರುವಂಥಾದ್ದು ಅಂದು. ೧೨ನೇ ತಾರೀಖಿನ ಮಧ್ಯಾಹ್ನದ ಮೇಲೆ ಪ್ರಾರಂಭವಾಗಿ ೧೩ನೇ ತಾರೀಖಿನಲ್ಲಿ ಹೊರಟು ಹೋದಂಥಾ ಅನೇಕ ಯಾತ್ರೆಯ ಜನಗಳಲ್ಲಿಯೂ, ಉಪದ್ರವ ವ್ಯಾಪಿಸಿದ್ದರಿಂದ ಯಿದು ಆಚೆಗೆ ಪ್ರಾರಂಭವಾಗಿ ಸರ್ವತ್ರ ವ್ಯಾಪಿಸಿ ಯಿತ್ತು. ೧೧ನೇ ತಾರೀಖಿನ ರಾತ್ರಿ ಮಳೆ ಬಿದ್ದದ್ದರಿಂದ ರೋಗ ತಲೆದೋರಿ ಉಬಾಲ ಜುಲಾಬ ಉಪದ್ರವದ ವಿಷವು ವ್ಯಾಪಕವಾಗಿಸುವದಕ್ಕೆ ಕಾರಣವಾಗಿರಬಹುದು. ನಡನಡೆಗುವ ಯಾತ್ರೆಯ ಜನಗಳ ಸಿಹಿಸೇನಾದಗುಂಪಿನಿಂದಲೇ ರೋಗ ಪ್ರಬಲಿಸುವದಕ್ಕೆ ಹೇತುವಾದ ಅನ್ವಯವಾಯಿತು.

ಈ ಪ್ರಕಾರ ರೋಗ ತಗಲಿದ್ದರ ಮೂಲವು ನಿಶ್ಚಯವಿಲ್ಲದೇ ಇರಬಹುದು. ಆದರೆ ಈ ಉಪದ್ರವದ ವಾಡಿಕೆಯಾದ ವಿಷಯಗಳಲ್ಲಿ ಯಿದರ ಸ್ವರೂಪವೂ ಲಕ್ಷಣವೂ ಸಹಾ, ಯಾತ್ರೆ ಜನಗಳ ತಮ್ಮ ತಮ್ಮ ಸ್ಥಳಗಳಿಗೆ ವಾಪಸ್ ಬರುವ ಕಾಲದಲ್ಲಿ ಸ್ಪಷ್ಟವಾಗಿ ದೃಢಪಡಿಸಲ್ಪಟ್ಟಿತು. ಯಾತ್ರೆಯ ಜನಗಳು ೧೨ನೇ ತಾರೀಖಿನ ಮಧ್ಯಾಹ್ನ ವಾಪಸು ಹೋಗುವದಕ್ಕೆ ಷುರು ಮಾಡಿ ದಿಕ್ಕು ದಿಕ್ಕಿಗೆ ಹೊರಟು ಹೋದರು.

೧೫ನೇ ತಾರೀಖಿನ ಪ್ರಾತಃಕಾಲದೊಳಗಾಗಿ ವಿಸ್ತಾರವಾಗಿದ್ದ ಗುಂಪೆಲ್ಲಾ ಶುದ್ಧಾಂಗವಾಗಿ ಹೊರಟು ಹೋಯಿತು. ಸಂವತ್ಸರದೊಳಗಾಗಿ ಅನುಕೂಲವಾದ ಕಾಲದಲ್ಲಿ ಆರೋಗ್ಯಕರವಾಗಿಯೂ ಸುಭಿಕ್ಷವಾಗಿಯೂ, ಆ ಜನಗಳಿಗೆ ಅನುಕೂಲಕ್ಕೋಸ್ಕರ ಬೇಕಾದ ವಿಷಯಗಳೆಲ್ಲಾ ಕಲ್ಪಿಸಲ್ಪಟ್ಟಿದಂತಾದೇಶದ ಮಾರ್ಗವಾಗಿ ಪ್ರಯಾಣವಾಗಿ ಹೋದರು, ಅವರು ಪ್ರಾಯಶಃ ಪಾದಚಾರಿಗಳಾಗಿಯೇ ಹೋಗಿರುತ್ತಾರೆ. ಮೈದಾನನಲ್ಲಿ ಅಥವಾ ಮರಗಳ ಕೆಳಗೆ ಮಲಗುತ್ತಾ ಇದ್ದರು. ಕೆಲವರಿಗೆ ಸಾಮಾನು ತೆಗದುಕೊಂಡು ಹೋಗುವ ಬಗ್ಯೆ ವೊಂಟೆಗಳಿದ್ದವು ಅನೇಕ ಯತ್ತಿನಭಂಡಿಗಳು ಯೆತ್ತುಗಳೂ ಇದ್ದವು. ಇವುಗಳಲ್ಲಿ ಹೆಂಗಸರು ಮಕ್ಕಳೂ ಪದಾರ್ಥಗಳೂ ಸಾಗುತ್ತಿದ್ದವು. ದಿನಕ್ಕೆ ೧೫ ಮೈಲುಗಳ ಮೊದಲು ೨೦ ಮೈಲುಗಳ ವರೆಗೆ ಪ್ರಯಾಣ ಮಾಡಿದರು. ಕೆಲವರು ಕುದುರೆ ಟಪ್ಪಾಲ್ ಬಂಡಿಗಳಲ್ಲಿ ಇನ್ನೂ ತ್ವರೆಯಾಗಿ ಪ್ರಯಾಣ ಮಾಡಿದರು. ಗಾಜೀಯಾಬಾದ್ ಅಮೃತಸರ್ ಈ ಸ್ಥಳಗಳಿಗೆ ಶೇರಿದ ಬಳಿಕ ಅನೇಕರು ರೇಯಿಲ್ ಬಂಡಿಗಳಲ್ಲಿಯೇ ಹೋದರು. ಮೀರಠ್‌ನಲ್ಲಿ ಸುಮಾರ್ ವೊಂದು ವಾರದ ವರೆಗೆ ಜನಗಳ ಗುಂಪು ನಿಬಿಡವಾಗಿ ಅನವರತವೂ ದಾರಿಯಲ್ಲಿ ಸಾಗುತ್ತಾ ಇದ್ದರು. ರೋಗ ವ್ಯಾಪಿಸುವದರ ಮಾರ್ಗವನ್ನು ತಿಳಿದುಕೊಳ್ಳುವದಕ್ಕಾಗಿ ಆ ಸ್ಥಳದಲ್ಲಿದ್ದೆನು. ರೋಗವು ಜನಗಳ ಬೆನ್ನು ಹತ್ತಿ ಹೋಗಿ ದಾರಿಯಲ್ಲಿ ಅನೇಕರು ಸಾಯುತ್ತಾ ಬಂದರು. ಹೀಗೆ ಸತಂಶ್ತಾವರಿಗಾಗಿ ಮಾಡಲ್ಪಟ್ಟ ಚಿತಿಗಳು ಆಬಳಿಯಣ ಜಮೀನುಗಳೆಲ್ಲಾ ತುಂಬಿ ಹೋಯಿತು. ಅಥವಾ ಹೆಣಗಳನ್ನು ಕಾಲ್ವೆಗಳಲ್ಲಿ ಯೆಳದು ಹಾಕುತ್ತಾ ಇದ್ದರು. ಅಥವಾ ಪೋಲೀಸಿನವರು ಹೆಣಗಳನ್ನು ಶೇರಿಸಿ ಹೂಳುತ್ತಾ ಇದ್ದರು. ಈ ರೋಗವು ಆಸ್ ಪಾಸ್ ಷಹರಗಳಿಗೂ ಗ್ರಾಮಗಳಿಗೂ ವ್ಯಾಪಿಸಿತು. ಯಾತ್ರೆಯ ಜನಗಳು ಹಿಂದುಸ್ತಾನ ದೇಶದಲ್ಲಿ ಸರ್ವತ್ರ ಅವರವರ ಸ್ವಂತ ಸ್ಥಳಗಳಿಗೆ ಹಿಂದಿಟ್ಟುಕೊಂಡು ಹೋದರು.

ಮುಖ್ಯಗಳಾದ ನಾಲ್ಕು ರಸ್ತೆಗಳ ಪೈಕಿ ಪ್ರತಿ ರಸ್ತೆಯಲ್ಲಿಯೂ ಯೇಪ್ರೈಲ್ ೧೩ರಲ್ಲು ಕೆಲವರಿಗೆ ರೋಗ ತಗಲಿತು ಯಾವದಂದರೆ; ೧ನೇದು ಪಶ್ಚಮದಿಕ್ಕಿನಲ್ಲಿ ಮುಲ್ತಾನಿಗೆ ಹೋಗುವ ಮಾರ್ಗದಲ್ಲಿ ಹರಿದ್ವಾರದಿಂದ ೨೩ ಮೈಲುಗಳ ದೂರದಲ್ಲಿರುವ ಬಾಜ್‌ವಾನಪೂರ್, ೨ನೇದು, ನಿರುತಿದಿಕ್ಕಿನಲ್ಲಿ ಹಿಸ್ಸಾರ್, ಮತ್ತು ಜಯಪೂರ್ ಈ ಸ್ಥಳಗಳಿಗೆ ಹೋಗುವ ದಾರೀಯಲ್ಲಿ ೧೯ ಮೈಲುಗಳ ದೂರದೊಳಗೆ ಯಿರುವ ರುರ್ಕಿ; ೩ನೇದು, ದಕ್ಷಣಕ್ಕೆ ಮೀರಠ್ ಮಾರ್ಗವಾಗಿ ಅಲಹಾಬಾದಿಗೆ ಹೋಗುವ ರಸ್ತೆ; ೪ನೇದು ಈಶಾನ್ಯಕ್ಕೆ ಅಯೋಧ್ಯೆಯ ಕಡೆಗೆ ಹಿಮವತ್ಪರ್ವತದಂಚ್ಚಿನಲ್ಲಿರುವ ಬಿಜನೂರ್ ಮಾರ್ಗದಲ್ಲಿ ೧೪ ಮೈಲುಗಳ ದೂರದಲ್ಲಿರುವ ನಜೀಬಾಬಾದ್ ಎಂಬ ಸ್ಥಳ, ಈ ಮೇರೆ ನಾಲ್ಕು ಕಡೆಗಳಲ್ಲಿ ರೋಗ ಪ್ರವ್ಯವಿಸಿತು. ಹರಿದ್ವಾರದಿಂದ ಆಯಾ ಸ್ಟೇಷನ್‌ಗಳಿಗೆ ಯಿರುವ ಫಾಸಲೇಯೂ, ಪ್ರಯಾಣಸ್ಥರಲ್ಲಿ ಯಾವಾಗ ರೋಗ ಹುಟ್ಟಿತೋ ಮತ್ತು ಆಯಾ ಸ್ಥಳದ ನಿವಾಸಿಗಳಿಗೆ ಯಾವಾಗ ತಗಲಿತೋ ಆಯಾ ತಾರೀಖುಗಳು ಸಹ ಯಿದರ ಹಂದಾ ಯಿರುವ ೨ನೇ ನಂಬರು ಪಟ್ಟಿಯಲ್ಲಿ ಕಾಣಿಸಿ ಯಿರುತ್ತವೆ. ಆಯಾ ಮುಖ್ಯ ಮುಖ್ಯ ಸ್ಟೇಷನ್‌ಗಳ ಸಿವಿಲ್ ಸರ್ಜಿಯನ್‌ಗಳು ಬರದ ರಿಪೋರ್ಟುಗಳಿಂದಲೂ, ಡಿಸ್ಟ್ರಿಕ್ಟುಗಳು ವ ಠಾಣೇಗಳ ಪೋಲೀಸ್ ವುದ್ಯೋಗಸ್ತರು ಬರದ ರಿಪೋರ್ಟುಗಳಿಂದಲೂ, ಈ ಪಟ್ಟಿ ತಯಾರ್ಮಾಡಲ್ಪಟ್ಟಿರುತ್ತದೆ. ಯಾತ್ರೆಯ ಜನಗಳು ವಾಪಸ್ ಹೋಗತಕ್ಕ ಮಾರ್ಗದಲ್ಲಿರುವ ೧೯೩ ಡಿಸ್ಟ್ರಿಕ್ಟುಗಳಿಂದಲೂ, ಷಹರ್‌ಗಳಿಂದಲೂ ರಿಟರ್ನ್‌ಗಳು ಬಂದಿರುವದರಲ್ಲಿ ಯೇಪ್ರೈಲ್, ಮೇ, ಜೂನ್, ಜುಲೈ ಈ ಮಾಹೇಗಳಲ್ಲಿ ಉಖಾಲ್ ಜುಲಾಬ್ ವುಪದ್ರವದಿಂದ ೪೦೧೫೩ ಮಂದಿ ಮೃತಪಟ್ಟದ್ದಾಗಿ ಕಾಣಿಸಲ್ಪಟ್ಟಿರುತ್ತದೆ. ಈ ರಿಪೋರ್ಟುಗಳಿಂದ ಕರಾರ್‌ವಾಕಾ ಅಂಶ ತಿಳಿಯಲಾರದು. ಸಾಮಾನ್ಯವಾದ ಪೋಲೀಸ್ ರಿಪೋರ್ಟುಗಳಲ್ಲಿ ಮರಣ ಸಂಗತೀಮಾತ್ರ ತಿಳಿಸಲ್ಪಟ್ಟಿರುತ್ತದೆ ಯೆಷ್ಟು ಮಂದಿಗೆ ಸದರಿ ರೋಗ ತಗಲಿತೋ ಯಾವ ತಾರೀಖಿನಲ್ಲಿ ತಗಲಿತೋ ಅದು ನಮೂದಿರುವದಿಲ್ಲವು. ಯಾತ್ರಾ ಜನಗಳು ಬಂದದಕ್ಕೂ ನಿವಾಸಿಗಳಲ್ಲಿ ರೋಗ ವುಂಟಾದ್ದಕ್ಕೂ, ಮಧ್ಯಕಾಲವನ್ನು ಎರಡು ವಿಷಯಗಳೊಳಗೂ ಸಂಭವಿಸಿದ ಘಾತಿಯ ದೆಸೆಯಿಂದ ಸುಮಾರ್ ಮೇಲೆ ನಿರ್ಣಯಿಸಿರುತ್ತೆ. ಯಾತ್ರಾ ಜನಗಳು ಬರುವದಕ್ಕೆ ಪೂರ್ವ ಆಯಾ ಗ್ರಾಮಗಳಲ್ಲಿಯೂ, ಡಿಸ್ಟ್ರಿಕ್ಟುಗಳೊಳಗೂ ಈ ಪ್ರಸಿದ್ಧವಾದ ಉಖಾಲ್ ಜುಲಾಬ್ ಉಪದ್ರವ ಯಿರಲಿಲ್ಲವೆಂಬದಕ್ಕೂ, ಯಾತ್ರಾ ಜನರನ್ನು ರೋಗ ಹಿಂಬಾಲಿಸಿತೆಂಬದಕ್ಕೂ, ಆದರಿಂದ ಅವರುಗಳು ಬಂದ ಬಳಿಕ ಆ ಜನಗಳು ಮೃತಪಟ್ಟರೆಂಬದಕ್ಕೂ, ಅವರುಗಳ ಮಿತ್ರರೂ, ಬಂಧುಗಳೂ, ನೆರೆ ಹೊರೆಯವರು ಕ್ಷಿಪ್ರದಲ್ಲಿಯೇ ಈ ರೋಗ ತಗಲಿ ಮೃತಪಟ್ಟರೆಂಬದಕ್ಕೂ, ಸ್ವತಂತ್ರಗಳಾದ ಯಿಷ್ಟು ಸಾಕ್ಷ್ಯಗಳು ಐಕಕಂಠ್ಯವನ್ನು ವಹಿಸಿ ಯಿರುತ್ತವೆ. ಈ ಸಂಗತಿಗಳಿಂದ ಈ ರೋಗ ವೊಬ್ಬರಿಂದೊಬ್ಬರಿಗೆ ಅಂಟತಕ್ಕದ್ದೆಂಬ ಅಂಶದಲ್ಲಿಯೂ ವೊಂದು ಸ್ಥಳದಿಂದ ಮತೊಂದು ಸ್ಥಳಕ್ಕೆ ವ್ಯಾಪಿಸುವ ಸ್ವಭಾವವುಳ್ಳದ್ದೆಂಬ ಅಂಶವನ್ನು ಕುರಿತು ಯಿಷ್ಟುಮಾತ್ರವೂ ಸಂದೇಹವಿಲ್ಲವು. ಬಂಧುಗಳು ಬಂದ ಮೇಲೆ ಕುಟುಂಬದ ಜನಗಳಿಗೂ, ಯಾತ್ರಾ ಜನಗಳೊಡನೆ ಸಂಬಂಧವುಳ್ಳ ಗ್ರಾಮಗಳ ಜನಗಳಿಗೂ, ಯಾತ್ರಾ ಜನಗಳು ಬಿಟ್ಟುಹೋದ ಆಹಾರವನ್ನು ತಿಂದವರಿಗೂ, ಅವರುಗಳೊಡನೆ ವೊಂದೇ ಬಂಡಿಯಲ್ಲಿ ಪ್ರಯಾಣಮಾಡಿದವರಿಗೂ ಉಪದ್ರವ ತಗಲಿದ್ದರ ರೀತಿಯನ್ನು ಅದರಿಂದ ತರುವಾಯ ಬಾಧಿಸಲ್ಪಟ್ಟದ್ದನ್ನು ಕುರಿತು ಅನೇಕ ನಿದರ್ಶನಗಳು ಯಿರುತ್ತವೆ.

ಉಖಾಲ್ ಜುಲಾಬ್‌ನಿಂದ ಬಾಧೆಪಡುತ್ತಾ ಯಿರತಕ್ಕ ಜನಗಳನೇಕರು ಬಂಡಿಗಳಲ್ಲಿ ಮುಂದಕ್ಕೆ ಸಾಗಿಸಲ್ಪಟ್ಟರು. ಈ ಪೈಕಿ ರೂಪೂರ್ ಯೆಂಬ ಸ್ಥಳದ ಹತ್ತಿರ ಶತದ್ರು ನದಿಯನ್ನು ದಾಟುವದಕ್ಕೆ ಮುಂದೆ ಬಂಡಿಗಳ ಆಜಮಾಯಿಷೀ ಮಾಡಿದ್ದರಲ್ಲಿ ಹೆಣಗಳು ಸಹ ಕಾಣಬಂದವು. ರೋಗ ತಗಲಿದವರು ರೇಯಿಲ್‌ವೇ ಮಾರ್ಗವಾಗಿ ಅಲಹಾಬಾದಿಗೂ, ಮುಲ್ತಾನಿಗೂ, ರವಾನೇ ಮಾಡಲ್ಪಟ್ಟರು. ಅಲ್ಲಿಯೂ ಯಿವರುಗಳು ಬಂದಬಳಿಕ ವುಪದ್ರವ ಕಾಣಿಸಿಕೊಂಡಿತು. ಮುಲ್ತಾನಿನಲ್ಲಿ ಏಪ್ರೇಲ್ ೨೬ನೇ ತಾರೀಖಿನಲ್ಲಿ ರೇಯಿಲ್ ಟರಮಿನಸ್ ಬಳಿ ವೊಬ್ಬ ಯಾತ್ರೇಯವನಿಗೂ ಮುಲ್ತಾನ್ ಷಹರ್‌ನಲ್ಲಿ ವೊಬ್ಬ ಯಾತ್ರೆಯವನಿಗೂ ತಾರೀಖು ೧೮ರಲ್ಲು ನೆರೆಹೊರೆಯವರಿಗೂ ತಗಲಿ ಕ್ರಮೇಣ ಷಹರ್‌ನೊಳಗೂ ಪ್ರಬಲಿಸಿ ಡಿಸ್ಟ್ರಿಕ್ಟೆಲ್ಲಾ ವ್ಯಾಪಿಸಿ ಕೊಂಡಿತು.

೧೮೪೬ನೇ ಯಿಸವೀಲಾಗಾಯಿತು ಮುಲ್ತಾನನಲ್ಲಿ ಉಖಾಲ್ ಜುಲಾಬ್ ವುಪದ್ರವ ಪ್ರಬಲಿಸದೇ ಯಿದ್ದದ್ದು ಆಶ್ಚರ್ಯವಾಗಿರುತ್ತೆ, ಸದರೀ ಯಿಸವಿಯಲ್ಲಿ ಪ್ರಾಯಶಃ ಲಾಹೂರ್‌ನಿಂದ ಶತದ್ರೂ ಮಾರ್ಗವಾಗಿ ರೋಗ ವ್ಯಾಪಿಸಿ ಬಂತು ಲಾಹೂರಿಗೂ ಮುಲ್ತಾನಿಗೂ ಮಧ್ಯೆ ಯಿರುವದಾರಿ ಬಹು ದೂರವಾಗಿಯೂ, ನಿರ್ಜಲವಾಗಿಯೂ ಜನ ಸಂಚಾರವಿಲ್ಲದೆಯೂ, ಯಿದ್ದದ್ದರಿಂದ ೧೮೫೦ನೇ ಇಸವಿಯಲ್ಲಿಯೂ, ೧೮೬೧ನೇ ಯಿಸವಿಯೊಳಗೂ ಲಾಹೂರ್‌ನೊಳಗೆ ಕೇವಲ ವುಗ್ರವಾಗಿ ತಗಲಿ ಯಿದ್ದ. ಉಖಾಲ್ ಜುಲಾಬ್ ವುಪದ್ರವು ಪ್ರಾಯಶಃ ಮುಲ್ತಾನಿಗೆ ವ್ಯಾಪಿಸದೇ ಯಿರಬಹುದು. ರೇಯಿಲ್‌ವೇ ಮೂಲಕ ಅತಿವೇಗವಾಗಿ ಜನಗಳು ವೊಂದೂರಿಂದ ವೊಂದೂರಿಗೆ ಹೋಗುವದ್ದರಿಂದ ರೋಗ ವ್ಯಾಪಿಸುವದಕ್ಕೆ ಮಾರ್ಗವಾಯಿತು. ದಾರೀಯಲ್ಲಿ ಬರುತ್ತಿದ್ದ ಯಾತ್ರೆ ಜನರಲ್ಲಿ ವೊಬ್ಬರಿಂದೊಬ್ಬರಿಗೆ ಬಂಡಿಗಳೊಳಗಾಗಲಿ, ವೊಬ್ಬರನ್ನೊಬ್ಬರು ಮುಟ್ಟುವವರಿಂದಲಾಗಲಿ, ರೋಗತಗಲಿದವರು ಯಿಳಿದು ಯಿದ್ದ ಗಲೀಜಾ ಸ್ಥಳದಲ್ಲಿ ವೊಬ್ಬಬ್ಬರಾಗಿ ಯಿಳಿಯುತ್ತಾ ಬಂದದ್ದರಿಂದಲಾಗಲಿ, ಪ್ರಾಯಶಃ ವುಪದ್ರವ ಅಂಟಿಕೊಂಡಿರುವದು, ಹಾಗಿಲ್ಲದಿದ್ದರೆ ದೂರ ದೇಶದಲ್ಲಿರುವ ಅವರವರ ಸ್ಥಳ ಶೇರುವದಕ್ಕೆ ಮುಂದೆಯೇ ರೋಗ ಶಮನವಾಗಿ ಹೋಗಿ ಯಿರುವದು.

ವಾಯುವ್ಯ ಶೀಮೆಯಲ್ಲಿಯೂ ಪಂಜಾಬ್‌ನೊಳಗು ಏಪ್ರೀಲ್ ಮೇ ಈ ಯೆರಡು ತಿಂಗಳ್ಗಳಲ್ಲಿಯೂ ಉಖಾಲ್ ಜುಲಾಬ್ ತಗಲುವ ಕಾಲವಲ್ಲವಾಗಿ, ಯಾತ್ರಾ ಜನಗಳು ಹೋಗುವದರಿಂದ ಆಗ ಸದರೀ ಸ್ಥಳಗಳೊಳಗೆ ವುಪದ್ರವ ತಗಲುವದೆಂದು ನಾನು ಯೆಣಿಸಲಿಲ್ಲ, ಆದರೆ ಮಳೆಗಾಲವೇ ವಾಡಿಕೆಯಾಗಿ ಈ ಸಾಂಕ್ರಾಮಿಕವಾದ ಉಖಾಲ್ ಜುಲಾಬ್ ವುಪದ್ರವ ತಗಲುವ ಕಾಲವಾದ್ದರಿಂದ ಆ ಕಾಲದಲ್ಲಿ ವುಪದ್ರವ ಹುಟ್ಟುವದೆಂದು ಯೆಣಿಸಿ ಯಿದ್ದೆನು. ಪರಂತು ಯಾತ್ರಾ ಜನಗಳು ಬಂದ ಮೇಲೆ ದೇಶವೆಲ್ಲಾ ಪ್ರಜೆಗಳಿಗೆ ರೋಗ ತಗಲಿ ಹಿಮವಂತದ ತಳದಲ್ಲಿ ಬಹಳವಾಗಿ ವಿಸ್ತರಿಸಿ ಪರ್ವತ ದೇಶದೊಳಗೆ ಬಹುದೂರ ವ್ಯಾಪಿಸಿತು, ಅಂಬಾಲಾ ಪೆಷಾವರ್ ಈ ಸ್ಥಳಗಳಲ್ಲಿಯೂ ಯೂರೋಪಿಯರ್ನ ಫೌಜುಗಳಲ್ಲಿ ಕಾಣಿಸಿಕೊಂಡಿತು. ಪುನಹ ಹಿಸ್ಸಾರ್ ಶೀಮೇ ಕಡೆಗೆ ನಿರುರುತಿ ಪ್ರಾಂತದಲ್ಲಿ ಮರಳಿ ಸಾಮಾನ್ಯವಾಗಿ ವಿಸ್ತರಿಸಿ ಕೇವಲ ಅಪಾಯಕರವಾಯಿತು. ಮೊದಲು ಯೆಣಿಸಿ ಯಿದ್ದಂತೆ ಮಳೆ ಬಂದದ್ದು ವಾಯುವ್ಯ ಶೀಮೆಗಳ ಪೈಕಿ ಅನೇಕ ಸ್ಥಳಗಳಲ್ಲಿ ಅಂದರೆ, ಮೀರಟ್, ಬರೇಲಿ, ಮೊರದಾಬಾದ್, ಗ್ವಾಲಿಯರ್, ಲಾಹೂರ್, ಈ ಸ್ಥಳಗಳಲ್ಲಿ ಪುನಹ ಸಂಭವಿಸಿ ಯೇಪ್ರೀಲ್ ತಿಂಗಳಲ್ಲಿ ತಪ್ಪಿ ಯಿದ್ದ ಯೂರೋಪಿಯರ್ನ ಫೌಜಿಗಳಿಗೆ ತಗಲಿತು.

ಆ ವುಪದ್ರವಕ್ಕೆ ವಾಡಿಕೆಯಾಗಿ ಸಾಂಕ್ರಾಮಿಕವಾದ ಉಖಾಲ್ ಜುಲಾಬಿಗೆ ಯಿರುವ ಲಕ್ಷಣಗಳಿದ್ದದ್ದರಲ್ಲಿ ೧೮೩೨ನೇ ಯಿಸವಿಯಲ್ಲಿ ನಾನು ಪೇರಿಸ್ ಪಟ್ಟಣದೊಳಗೆ ಪ್ರಥಮತಃ ನೋಡಿದ ತರುವಾಯ ನನ್ನ ತಿಳುವಳಿಕೆಗೆ ಬಂದ ಅದರ ಭೇದಗಳು ಈ ರೋಗದಲ್ಲಿ ವುಂಟಾಗಿದ್ದವು, ಸಿಯಲ್‌ಕೋಟ್ ಅಸಿಸ್ಟೆಂಟ್ ಕಮಿಶ್ನರಾದ ಮೇಜರ್ ಮೆರ್ಸರ್ ಯೆಂಬವರು, ಯಾತ್ರಾ ಜನಗಳಿಗೆ ಸದಾ ರೋಗ ತಗಲಿದ್ದನ್ನು ಚನ್ನಾಗಿ ವಿವರಿಸಿ ಯಿದ್ದಾರೆ, ಹ್ಯಾಗಂದರೆ.

" ೧ನೇದು—ದಾಹ.

" ೨ನೇದು—ಹೊಟ್ಟೆ ಕುಗ್ಗಿದಹಾಗೆ ಆಗುವದು, ಮತ್ತು ಕಲೀಜಾ ಪ್ರದೇಶದಲ್ಲಿ ಪಕ್ಕೆಯೆಲುವಿನಲ್ಲಿ ನೋವು ಕಾಣುವದು.

" ೩ನೇದು—ಮುಖದಲ್ಲಿ ಚಿಂತಾಭಾವ ಕಣ್ಣುಗಳು ಗುಣಿ ಬಿದ್ದಿರುವಿಕೆ.

ಈ ದೆಶಿಯ ಪರ್ಯಂತ ಉಖಾಲ್ ಜುಲಾಬಿಗೆ ಪರಿಹಾರಕವಾದ ಮಾತ್ರೆಯು ಬಹಳ ಪ್ರಯೋಜನ ಕರವಾಗಿಯೇ ಯಿತ್ತು, ಆ ಮಾತ್ರೆಗಳು ಶಿಕ್ಕದೇ ಹೋದಾಗ ರೋಗವು ಕ್ಷಿಪ್ರದಲ್ಲಿಯೇ ಭೇದಿ ವಾಂತಿ ರೂಪವಾಗಿಯೂ, ಶೆಳವು, ಶಕ್ತಿ ತಗ್ಗುವಿಕೆ ಯಿಂತಾದ್ದೆಲ್ಲಾ ವುಂಟಾಗಿ ಕೆಲವು ಗಂಟೆಗಳ ಹೊತ್ತಿನಲ್ಲಿಯೇ ಮರಣ ಸಂಭವಿಸುವದು.

ದೇಶದಲ್ಲಿ ಸರ್ವತ್ರ ಯಾತ್ರೆಯ ಜನಗಳು ಪ್ರಯಾಣ ಮಾಡುವ ಮಾರ್ಗಗಳಲ್ಲಿರುವ ಆಯಾ ಮೊಕ್ಕಾಂ ಮಾಡುವ ಸ್ಥಳಗಳಲ್ಲಿಯೂ, ಸ್ಟೇಷರ್ನಗಳಲ್ಲಿಯೂ, ರೋಗತಗಲಿದ ಗ್ರಾಮಗಳಲ್ಲಿಯೂ, ಕಾಲರಾ ಮಾತ್ರೆಗಳು ಅನೇಕ ಸಹಸ್ರ ಜನಗಳಿಗೆ ಕೊಡಲ್ಪಟ್ಟದ್ದಲ್ಲದೆ ಕಾಯಿಲೇ ಆಗಿರುವ ಜನಗಳಿಗೆ ಈ ಮಾತ್ರೆಗಳು ತೋರಿಸಲ್ಪಟ್ಟವು ಯಿದರಿಂದ ಮೇಲೆ ಕಂಡ ಅನುಕೂಲವಾದ ಫಲವುಂಟಾಗಿರುತ್ತೆ.

ಈ ರೋಗದ ಆಯಾ ಸ್ಥಿತಿಯಲ್ಲಿ ಮಾಡಬೇಕಾದ ಚಿಕಿತ್ಸೆಯನ್ನು ಕುರಿತು ಈಬಗ್ಗೆ ವಿವರವಾಗಿ ತಿಳಿಸಬೇಕಾದ್ದಿಲ್ಲವು ಆದರೆ ಈಗ ಗವರ್ನಮೆಂಟಿನವರು ಯೇರ್ಪಡಿಸಿದಂತೆ ಸಾಮಾನ್ಯವಾದ ರೀತಿಯಿಂದ ಚಿಕಿತ್ಸೆ ಮಾಡುವದರಲ್ಲಿ ಈ ರೋಗ ತಗಲಿದವರನ್ನು ಪರಭಾರೇ ಯಿಡುವದರ ಪ್ರಯೋಜನವನ್ನು ಕುರಿತು ವಾಡಿಕೆಯಾಗಿ ಶೀಸ ಬೇಕಾದ ತಪಶೀಲ್ ೪ನೇ ನಂಬರ ಪಟ್ಟಿಯಲ್ಲಿ ಕಾಣಿಸಲ್ಪಟ್ಟಿದೆ. ಈ ಪಟ್ಟಿಯಿಂದ ೧೮೬೧ನೇ ಯಿಸವಿ ಲಾಗಾಯಿತು ಉಖಾಲ್ ಜುಲಾಬ್ ವುಪದ್ರ ತಗಲಿ ಯೂರೋಪಿಯರ್ನ ಫೌಜುಗಳಲ್ಲಿ ಜನಗಳು ಮೃತ ಪಡುತ್ತಾ ಯಿದದ್ದು ಕಡಮೆ ಯಾದಂತೆ ತಿಳಿಯಲಾಯಿತು. ಆಗ ಆಗ್ರಾದಲ್ಲಿ ಷಹರ್‌ನಿಂದ ಹೊರಗೆ ಡೇರೇ ಹಾಕಿಸಿ ಅಲ್ಲಿಗ ಫೌಜು ರವಾನೇ ಮಾಡಿದ್ದು ಪ್ರಯೋಜನಕರವಾಯಿತು. ಈಚಿಗೆ ಈ ಪ್ರಕಾರ ನಡಿಸುವಂತೆ ಗವರ್ನಮೆಂಟಿನವರು ಹುಕುಂ ಮಾಡಿರುತ್ತಾರೆ. ವುಪದ್ರವದ ಪ್ರಾಬಲ್ಯ ತಗ್ಗದೇ ಯಿದ್ದಾಗ್ಯೂ ಪೂರ್ವ ವುಪದ್ರವ ಕಾಲದಲ್ಲಿ ರೋಗ ತಗಲಿದವರ ಪೈಕಿ ಮೃತರಾಗುತ್ತಾ ಯಿದ್ದವರಿಕ್ಕಿಂತ ಹೆಚ್ಚಾಗಿ ಸಾಯುತ್ತಾ ಯಿದ್ದಾಗ್ಯೂ ಮೇಲೆಕಂಡ ಕ್ರಮದಿಂದಲೂ, ಹೆಚ್ಚಾಗಿ ವಸತಿಯನ್ನು ಕಲ್ಪಿಸಿದ್ದರಿಂದಲೂ, ಜನಗಳಿಗೆ ಆರೋಗ್ಯ ಕರಗಳಾದ ವಿಷಯಗಳನ್ನು ಅಭಿವೃದ್ಧಿ ಪಡಿಸಿದ್ದರಿಂದಲೂ, ಸಹ ನ್ಯಾಯವಾಗಿ ಪ್ರಾಣಗಳು ವುಳಿದವೆಂದು ಹೇಳಬಹುದು. ಸರ್ ೧೮೫೬—೧೮೬೦—೧೮೬೧ ಈ ಯಿಸವಿಗಳಲ್ಲಿ ಸಂಭವಿಸಿದ ವುಪದ್ರವಗಳಲ್ಲಿ ಫೌಜಿನ ಸಂಖ್ಯೆಯ ಮೇಲ ಸೇಕಡಾ ೭೮ ಪ್ರಕಾರ ಮೃತಿ ಹೆಚ್ಚಿತು. ಆದರೆ, ೧೮೬೭—೬೮—೬೯ ಈ ಯಿಸವಿಗಳಲ್ಲಿ ಸೇಕಡಾ ೪ಕ್ಕಿಂತ ಕಮ್ಮಿಯಾಯಿತು ಈ ಪ್ರಕಾರ ಕಾಸಲ ರೋಗ ತಗಲಿದ ಆಯಾ ಸ್ಟೇಷರ್ನಗಳಲ್ಲಿ ೩೦೦ ಮಂದಿ ಮಿಕ್ಕ ಹಾಗಾಯಿತು. ಇಂಡ್ಯ ದೇಶದಲ್ಲಿ

ಈರೋಗದ ವ್ಯಾಪಕತೆಯನ್ನು ವಿವರಿಸುವದರಲ್ಲಿ ಯಾತ್ರೆ ಜನಗ
ಳು ಹರಿದ್ವಾರ ದೊಳಗಿರುವಾಗಲೂ, ತಮ್ಮ ತಮ್ಮ ಸ್ಥಳಗಳಿಗೆ
ವಾಪಸ್ ಬರುವಾಗಲೂ, ಅವರುಗಳಿಗೆ ಆರೋಗ್ಯವೂ, ಸೌಖ್ಯವೂ,
ವುಂಟಾಗುವ ಬಗ್ಗೂ, ಅವರುಗಳು ಯಾವ ದೇಶದ ಮಾರ್ಗ
ಹೋಗುತ್ತಾರೋ ಆ ದೇಶದಲ್ಲಿ ರೋಗೋಪದ್ರವಗಳುಂಟಾಗದೇ
ಬಂದೋಬಸ್ತು ಆಗುವ ಬಗ್ಗೂ ಮುಂಜಾಗ್ರತೆಗೋಸ್ಕರ ಮಾಡ
ಲ್ಪಡುವ ವುಪಾಯಗಳನ್ನು ನಮೂದಿಸ ಬಹುದಾಗಿರುತ್ತೆ.

ಹರಿದ್ವಾರದಲ್ಲಿರುವಾಗ ಜನಗಳಿಗೆ ವೊಳ್ಳೆಯು ಆಧಾರ ನೀರು
ಕ್ರಮವಾದ ಶಿಖರದಲ್ಲಿ ಧಾರಾಳವಾಗಿ ಗಾಳಿ ಬೀಸುವದಕ್ಕೆ ಅವ
ಕಾಶ ಯಿಲ್ಲದೆ ಗಲೀಜಾ ವಗೈರೇ ಪಾಕ್ ಮಾಡತಕ್ಕ ಬಗ್ಯೆ
ತಕ್ಕ ಯೇರ್ಪಾಡುಗಳು ಇವುಗಳು ವುಪದ್ರವ ಸಂಭವಿಸದೇ ಯಿ
ರುವದಕ್ಕೆ ಕಾರಣಗಳಾಗುತ್ತವೆ. ಸದರೀ ವಿಷಯಗಳನ್ನೆಲ್ಲಾ ಸರಿ
ಯಾಗಿ ವಿಚಾರಿಸಿ ಕೊಳ್ಳತಕ್ಕ ಬಗ್ಯೆ ವೊಳ್ಳೇ ವುಪಯುಕ್ತವಾದ
ಪೋಲೀಸ್ ಶಿಬ್ಬಂದಿ ಯಿಡಲ್ಪಟ್ಟಿತು.

ಕ್ರಮವಾಗಿಯೂ, ಸೊಟ್ಟೆ ಯಿಲ್ಲದೆ ವಿಶಾಲವಾಗಿರುವ ಬೀದಿ
ಗಳೊಡನೆ ಯೇರ್ಪಡಿಸಿಯಿದ್ದ ಶಿಖರಗಳಲ್ಲಿ ಜನಗಳು ಬಂದೆ ಕೂ
ಡ್ಲೆ ಯಿಳಿದರು ಅವುಗಳಲ್ಲಿ ಆರೋಗ್ಯ ಕರಗಳಾದ ಆಹಾರವಸ್ತುಗ
ಳೂ ಇತರ ಪದಾರ್ಥಗಳು ವಿಸ್ತಾರವಾಗಿ ಇಡಲ್ಪಟ್ಟಿದ್ದವು. ಗಂಗಾ
ನದಿ ಅಲ್ಲಿಗೆ ಸಮೀಪದಲ್ಲಿತ್ತು. ಇದಲ್ಲದೆ ಕೆಲವು ಶೀನೀರು ಭಾವಿಗಳು
ಇದ್ದವು ಅನುಕೂಲವಾದ ಸ್ಥಳಗಳಲ್ಲಿ ಪಾಯಖಾನೆಗಳು ಮಾಡ
ಲ್ಪಟ್ಟು ಅವುಗಳಿಗೆ ಮರೆಗಳು ಹಾಕಿದ್ದವು. ಪಾಯಖಾನೇ ಗುಡಿಸು
ವ ಬಗ್ಯೆ ೩೦೦ ಮಂದಿ ಹಲಾಲ್‌ಖೋರರು ಮೊಕರರ್ ಮಾಡಲ್ಪಟ್ಟ
ರು. ಮತ್ತು ಪಾಯಖಾನೆಗೆ ವೊಣಮಣ್ಣು ಚಲ್ಲಿ ದುರ್ಗಂಧ ವ್ಯಾ
ಪಿಸದೇ ಯಿರುವಂತೆ ಮಾಡೋಣಾಯಿತು ಇದರಿಂದಲೇ ಉಖಾಲ್
ಜುಲಾಬ್ ವುಪದ್ರವ ತಗಲಿದ ಹಾಗೆ. ಕೆಲವರು ನೇಟೀವ್‌ಗಳು ಹೇಳಿ
ದರು. ಹ್ಯಾಗಂದರೆ ಮಲಗಳು ಪೂರ್ವದಂತೆ ಬಿಸಲಿಗೆ ವೊಣಗುವ
ದಕ್ಕೆ ಬದಲಾಗಿ ಮಣ್ಣಿನ ಕೆಳಗೆ ಸಿಕ್ಕಿ ತೇವ ಆರದೆ ಮಳೆ ಬಿದ್ದಾ
ಗ ಮಣ್ಣಿನಲ್ಲಿ ನೀರು ಪ್ರವೇಶಿಸಿ ವಿಷಮಯವಾದ ಹಬೆ ಯೇಳು
ವದಕ್ಕೆ ಕಾರಣವಾಗುತ್ತಂತೆ. ಈ ವೊಂದು ಯೇರ್ಪಾಡನ್ನು
ಮಾತ್ರ ಯಾತ್ರ ಜನಗಳು ವಿಶೇಷವಾಗಿ ಕೊಂಡಾಡಲಿಲ್ಲವು ಈ
ಅಂಶದಲ್ಲಿ ಕೆಲವು ಕೀಳು ಸಂಭವಿಸಿತು. ಆದರೆ ಇವು ಪೂರ್ವದ ಯೇ
ರ್ಪಾಡಿಗಿಂತ ಈಗಿನ ಯೇರ್ಪಾಡು ಪ್ರಕಾರ ಕಡಮೆ ಆದ ಸಂಗತಿ
ಜನಗಳು ಪೂರ್ವ ವುತಾರೇ ಮಾಡುತ್ತಾ ಇದ್ದ ದುಸ್ಸಹವಾದ ದು
ರ್ಗಂಧ ವಿಲ್ಲದೇ ಹೋದ್ದರಿಂದ ನಿದರ್ಶನಕ್ಕೆ ಬಂದಿರುತ್ತೆ. ಮಲಗ
ಳು ಬಂಡಿಗಳ ಮೇಲೆ ಸಾಗಿಸಿ ಬಿಡುವದು ಒಳ್ಳೇದೆಂದು ತಿಳಿಸಲ್ಪ
ಟ್ಟಿತು. ಲಂಡನ್ ಪಟ್ಟ ಪ್ರಜಾ ಸಂಖ್ಯೆಯು ಪೈಕಿ ಮೂರರಲ್ಲಿ ಎರ
ಡರಷ್ಟು ಪ್ರಜೆಗಳುಳ್ಳ ಜನ ಸಮೂಹಕ್ಕೆ ಆಪ್ರಕಾರ ಗಲೀಜಾ
ಪಾಕ್ ಮಾಡುವದಕ್ಕೆ ಶಿಬ್ಬಂದಿಯನ್ನು ಯೇರ್ಪಡಿಸ ಬೇಕಾದರೆ
ಪ್ರಯಾಸವಾಗಿಯೂ, ಸ್ವಲ್ಪ ಹೆಚ್ಚಾಗಿ ಖರ್ಚು ಹಿಡಿಯುವದಲ್ಲ
ದೆ ಜೇಸಿಗೆ ಕಾಲದಷ್ಟು ಸಾರ್ಥಕವಾಗಿಯೂ, ವುಪದ್ರವ ವಿಲ್ಲದೆ
ಯೂ, ಇರಲಾರದು. ಮಳೆ ಬೀಳುವಾಗ ಇನ್ನು ಪರಿಷ್ಕಾರವಾಗಿ
ಇರುವದೆಂಬ ಅಂತ ಸಂಶಯಿಸ ತಕ್ಕದ್ದಾಗಿದೆ.

ವ್ರಣವೈದ್ಯಕ್ಕೋಸ್ಕರವಾಗಿಯೂ, ಆಕಸ್ಮಿಕಗಳಾದ ಅಪಾ
ಯಗಳಿಗೋಸ್ಕರವಾಗಿಯೂ, ಮುಖ್ಯವಾದ ಮೂರ[illegible]
ಗಳು ಸ್ಥಾಪಿಸಲ್ಪಟ್ಟವು, ಮತ್ತು ಪ್ರತ್ಯೇಕವಾದ ಸ್ಥಳದಲ್ಲಿ[illegible]
ಬು ಉಖಾಲ್‌ಜುಲಾಬ್ ವಗೈರೇ ಅಂಟು ರೋಗಗಳಿಗೋಸ್ಕರ ಬೇ
ರೊಂದು ಆಸ್‌ಪಟಲ್ ಯಿತ್ತು, ಯಾತ್ರ ಜನರಲ್ಲಿ ಸಂಭವಿಸಿಯಿದ್ದ
ಪ್ರಯಾಸಗಳಾದ ಅನೇಕ ರೋಗಗಳಿಗೆ ಮದ್ದುಗಳು ಕೊಡುವದ
ರಿಂದ ಬಹಳ ಕ್ಷೇಮವಾಯಿತು ರೋಗ ಕೇವಲ ಮುದರಿ ಚಿಕಿತ್ಸಾ
ಶಯಿಲ್ಲದ ಕೆಲವರಿಗೆ ಸಾಯುವದಕ್ಕಿಂತ ಮುಂದಾಗಿ ಅವುಷಧ
ಕೊಡುವದ್ದರಿಂದ ವುಪದ್ರವು ವಾಸಿಯಾಗಿ ಸುಖ ವುಂಟಾಯಿತು.

ದೇಶದಲ್ಲಿ ಸರ್ವತ್ರ ಈ ಅಂಟು ರೋಗ ತಗಲಿದ ಯಾತ್ರಾ ಜನಗ
ಳ ಗುಂಪು ಸಾಗಿ ಹೋಗುವದಕ್ಕೂ ಪ್ರಜೆಗಳು ತಮ್ಮ ಹಿಂದಿಟ್ಟು
ಕೊಂಡು ಬಂದಂಥಾ ರೋಗ ತಗಲದೇ ನಿರೋಧಿಸುವ ಬಗ್ಗೂ
ಮಾಡಲ್ಪಟ್ಟ ವ್ಯವಸ್ಥೆಗಳು ಪೂರ್ತಿಯಾಗಿ ನೆರವೇರಲಿಲ್ಲವು. ಈ
ವಿಷಯದಲ್ಲಿ ತಿಳಿಸಲ್ಪಟ್ಟ ನಿಯಮಗಳಲ್ಲಿ ಖಂಡಿತವಾಗಿ ನಿಗೇ ಇ
ಟ್ಟು ಅವು ಯುಕ್ತವಾಗಿ ನೆರವೇರಿಸಲ್ಪಟ್ಟವೋ ಹ್ಯಾಗೋ ಆ ವಿ
ಷಯ ಸಂಶಯವಾಗಿದೆ.

ಯಾತ್ರಾ ಜನಗಳು ಯಾವ ಪಟ್ಟಣದ ಮಾರ್ಗವಾಗಿ ಹೋದ
ರೋ ಆ ಪಟ್ಟಣವನ್ನು ಪ್ರವೇಶಿಸದೇ ಅಡ್ಡಿ ಮಾಡತಕ್ಕದ್ದು. ದಾ
ರೀಯಲ್ಲಿ ಅವರುಗಳಿಗೆ ಆಹಾರವೂ ಅವುಷಧವೂ ಕೊಡುವದು,
ರೋಗ ತಗಲಿ ಅವರಿಗೆ ವಾಸಿಯಾಗುವ ಪರ್ಯಂತ ಅವರನ್ನು ಆಸ್
ಪಿಟಲ್‌ಗಳಲ್ಲಿ ನಿಲ್ಲಿಸಿಕೊಂಡು ಮತ್ತು ಅವರನ್ನು ನೋಡಿಕ್ಕೊಳ್ಳು
ವ ಬಗ್ಯೆ ವೊಬ್ಬ ಆಪ್ತನಾದವನನ್ನು ನಿಲ್ಲಿಸಿಕೊಂಡು ಮಿಕ್ಕಾದವ
ರನ್ನು ಕಳುಹಿಸಿ ಬಿಡುವದು. ಇವುಗಳ ಸಾಮಾನ್ಯವಾಗಿ ನಡಿಸಿದ
ವಿಷಯಗಳು ಯಾತ್ರೆಯ ಜನಗಳು ತಮ್ಮ ತಮ್ಮ ಸ್ವಂತ ಷಹರ್
ಗಳಿಗೆ ಬಂದ ಮೇಲೆ ಕೆಲವು ಷಹರ್‌ಗಳಲ್ಲಿ ವೊಂದು ವಾರದವರಿಗೆ
ಪ್ರತ್ಯೇಕ ಯಿಡಲ್ಪಟ್ಟಿದ್ದರು ಅಂದರೆ ಅಂಟುರೋಗ ತಗಲಿ ಯಿರು
ತ್ತೋ ಯೆಂಬ ಗುಮಾನಿ ಮೇಲೆ ಪ್ರತ್ಯೇಕ ಯಿಟ್ಟು ಅಜಮಾ
ಯಿಷೀ ಮಾಡಿದರೂ ಇತರ ಷಹರುಗಳಲ್ಲಿ, ಯಾತ್ರೆಯವರು ವೊಂ
ದು ದಿನ ಮಾತ್ರ ಪ್ರತ್ಯೇಕ ಯಿರಿಸಲ್ಪಟ್ಟವದ್ದು ಆರೋಗ್ಯ ವುಂ
ಟಾಗಿದ್ದರೆ ಮಾರನೇ ದಿನ ವೂರೊಳಗೆ ಪ್ರವೇಶಿಸಿದರು ಲಷ್ಕರ್‌ಗಳ
ಹತ್ತಿರಲೂ, ಪಟ್ಟಣಗಳ ಹತ್ತಿರಲೂ, ಯಾತ್ರ ಜನಗಳು ಬಂದಾಗ
ವೂರ ಹೊರಗೆ ೩, ೪, ೫ ಮೈಲುಗಳ ದೂರದಲ್ಲಿ ದೊಡ್ಡ ಮಾ
ರ್ಗದೊಳಗೇನೆ ಅಟಕಾಯಿಸಲ್ಪಟ್ಟು ಕೆಲವು ಮೈಲುಗಳು ಆಚೆ
ಗೆ ಪುನಶ್ಚ ದಾರಿಗೆ ಹೋಗಿ ಸೇರುವಂತೆ ಮಾತ್ರ ಕಳುಹಿಸಲ್ಪಟ್ಟ
ರು. ದಾರೀಯಲ್ಲಿ ಅಲ್ಲಲ್ಲಿ ಪೋಲೀಸ್ ಥಾಟ್ ಇಡಲ್ಪಟ್ಟಿತು. ತಮಾಂ
ಲಷ್ಕರ್ ಜಾಗಾಗಳಲ್ಲಿಯೂ, ಖಂಡಿತವಾಗಿ ಥಾಜ್ ಯೇರ್ಪಾಡುಗ
ಳು ಮಾಡಲ್ಪಟ್ಟವೂ. ದಾರೀಯಲ್ಲಿ ಆಯಾ ದಿಕ್ಕಿಗೆ ಹೋಗುವ
ಸ್ಥಾನದೊಳಗೆ ಜಿನಿಸಿಗಳನ್ನು ಮಾರತಕ್ಕ ಅಂಗಡಿಗಳ ಸಹಿತವಾ
ಗಿ ವೊಂದು ಕಾಲರ ವೈದ್ಯಶಾಲೆ ಯಿಡಲ್ಪಟ್ಟಿತು. ವುಪದ್ರವತಗ
ಲಿದವರೆಲ್ಲ ಅಲ್ಲಿ ನಿಲ್ಲಿಸಿಕೊಳ್ಳಲ್ಪಟ್ಟರು ಜನಗಳು ಇಳಿಯುವ ಕೆಲ
ವು ದೊಡ್ಡ ಮೈದಾನಗಳ ಬಳಿ ಬದಸ್ತೂರ್ ಯೇರ್ಪಾಡುಗಳು
ಮಾಡಲ್ಪಟ್ಟವು. ಆದರೆ ಕಲ್ಮಷ ಮೈಗೆ ಅಂಟಿ ಯಿದ್ದವರು ತ
ತ್ತಾಪಿ ಬುರ್ಖೇ ಹಾಕಿ ಯಿದ್ದ ಗಾಡಿಗಳಲ್ಲಿದ್ದವರ ವುಪೇಕ್ಷಿಸಲ್ಪಟ್ಟಿ
ರ ಬಹುದು. ಕೆಲವರು ಯಾತ್ರೆಯವರು ಪೋಲೀಸ್ ಠಾಣೇದವ

ರನ್ನು ವಿವಿ ಪದಾರ್ಥಗಳಿಗಾಗಿ ಪಟ್ಟಣಗಳಿಗೆ ಹೋಗಿದ್ದ ಹಾಗೂ ಪಾರರು ಯಾತ್ರಾ ಜನಗಳನ್ನು ನೋಡುವದಕ್ಕೆ ಹೋಗಿದ್ದು ವಾಪಸ್ ಬಂದ ಕೂಡ್ಲೆ ಉಬಾಲ್ ಜುಲಾಬ್ ತಗಲಿದಂತೆ ವೃತ್ತಾಂತವಿದೆ. ಯಾತ್ರೆಯ ಜನರು ಸಾಗಿಹೋಗುವಾಗ ಯೆರಡು ಸ್ಥಳಗಳಲ್ಲಿ ಮಾತ್ರ ಯೂರೋಪಿಯರ್ ಫೌಜಿನವರಲ್ಲಿಯೂ ಒಂದು ಜೈಲ್ ನೊಳಗೂ ಉಬಾಲ್ ಜುಲಾಬ್ ತಗಲಿತು. ಆದರೆ ಕೆಲವು ಪಟ್ಟಣಗಳಲ್ಲಿ ಉಪದ್ರವು ತಗಲಲಿಲ್ಲವು. ಸಾಮಾನ್ಯವಾಗಿ ರೋಗ ತಗಲಿದವರ ಸಂಖ್ಯೆ ಸ್ವಲ್ಪವಾಗಿರುತ್ತೆ. ಬಹಳ ದಿನಗಳು ರೋಗ ವ್ಯಾಪಿಸಲಿಲ್ಲ ಆದಾಗ್ಯೂ ಬಹು ವಿಸ್ತಾರವಾದ ದೇಶದಲ್ಲಿ ರೋಗ ತಗಲಿದ್ದರಿಂದ ಯಾತ್ರೆಯ ಜನರಲ್ಲಿಯೂ ಪಾರರಲ್ಲಿಯೂ ೪೦೦೦೦ ಮಂದಿಗಿಂತ ಹೆಚ್ಚಾಗಿ ಮೃತಪಟ್ಟಂತೆ ನನಗೆ ವೃತ್ತಾಂತ ಬಂತು. ಈ ಸಂಖ್ಯೆ ನಿಜವಾಗಿ ಮೃತಪಟ್ಟ ಜನಗಳ ಸಂಖ್ಯೆಗಿಂತ ಬಹಳ ಕಡಮೆ ಯೆಂಬದಕ್ಕೆ ಸಂದೇಹವಿಲ್ಲ. ಜೈಲಿಗಳಲ್ಲಿಯೂ, ಲಷ್ಕರ್ ಜಾಗಾಗಳಲ್ಲಿಯೂ, ಇದ್ದ ಮಟ್ಟಿಗೆ ಈ ಉಪದ್ರವ ಉಂಟಾಗದೇ ಇದ್ದದ್ದರಿಂದ ಇದು ಹುಟ್ಟದೇ ಯಿರತಕ್ಕ ಬಗ್ಯೆ ಆಬಳಿ ಮಾಡಲ್ಪಟ್ಟ ಉಪಾಯಗಳನ್ನು ಸರ್ವತ್ರ ಮಾಡಬಹುದಾಗಿ ಕಾಣುತ್ತದೆ. ಅಂಥಾ ಉಪಾಯಗಳ್ಯಾವವೆಂದರೆ ಖಂಡಿತವಾಗಿ ಪ್ರತ್ಯೇಕ ಪಡಿಸುವಿಕೆ ಯಿತರ ಷಹರ್ ವಗೈರೇಗಳೊಡನೆ ಸಂಬಂಧವಿಲ್ಲದೇ ಯಿರುವಿಕೆ ಯಿವುಗಳು. ಆದರೆ ವಿಶೇಷ ವ್ಯಾಪಾರ ನಡೆಯುವ ದೊಡ್ಡ ಷಹರ್‌ಗಳೂ, ಪವಳೀ ಗೋಡೆಗಳಿಲ್ಲದ ಬೈಲಾದ ಗ್ರಾಮಗಳೂ ಯಿರುವ ಪ್ರಜೆಗಳು ನಿಬಿಡವಾಗಿಯೂ, ಯಿರುವ ದೇಶದಲ್ಲಿ ಪ್ರಜೆಗಳ ಸಂಬಂಧವನ್ನು ತಪ್ಪಿಸುವದಕ್ಕೆ ಸಾಧ್ಯವಾಗಿರುವದೋ; ಇಂಡ್ಯಾ ದೇಶದವರಂತೆ ಅದೃಷ್ಟಾನುಗುಣವಾಗಿ ಆಗುತ್ತೆಂದು ನಂಬಿ ಯಿರತಕ್ಕಂಥಾ ಜನಗಳು ಮನಃಪೂರ್ವಕವಾಗಿ ಪರಸ್ಪರ ಸೇರತಕ್ಕದ್ದನ್ನು ನಿರೋಧಿಸುವದಕ್ಕೆ ಸಾಧ್ಯವಾದೀತೆ, ಅಲ್ಲಿ ಮಾಡಲ್ಪಟ್ಟ ಉಪಾಯಗಳ ದೆಸೆಯಿಂದ ಅನೇಕ ಯಾತ್ರಾ ಜನಗಳು ಪೇದರು ಪಾರಾರಲ್ಲಿ ಉಪದ್ರವ ವ್ಯಾಪಿಸತಕ್ಕಂಥಾದ್ದು ವಿಶೇಷವಾಗಿ ಅಡ್ಡಿ ಮಾಡಲ್ಪಟ್ಟಿತು. ಸಂಪೂರ್ಣಾಂಗವಾಗಿ ಈ ರೋಗ ತಗಲದೇ ನಿವೃತ್ತಿ ಮಾಡುವದಕ್ಕಾಗುವದಿಲ್ಲವು. ಪರಂತು ದಾರಿಗಳಲ್ಲಿಯೂ, ದೇಶದಲ್ಲಿ ಸಾಧಾರಣವಾಗಿ ಇರುವ ಪಟ್ಟಣಗಳಲ್ಲಿಯೂ, ಯಾತ್ರಾ ಜನರು ಇಳಿಯುವ ಸ್ಥಾನಗಳಲ್ಲಿ ಯಿನ್ನೂ ಆರೋಗ್ಯಕರಗಳಾದ ಯೇರ್ಪಾಡುಗಳನ್ನು ಮಾಡುವಿಕೆ ರೋಗಿಸ್ಟರನ್ನು ಪ್ರತ್ಯೇಕ ಪಡಿಸುವಿಕೆ ಚಿಕಿತ್ಸೆ ವಗೈರೇ ವಿಷಯಗಳನ್ನು ಪ್ರಬಲ ಪಡಿಸುವಿಕೆ ಈ ವಿಷಯಗಳಿಂದ ಯಿನ್ನು ವಿಶೇಷವಾಗಿ ಉಪದ್ರವ ನಿವೃತ್ತಿಯಾಗಬಹುದು. ಆರೋಗ್ಯಕ್ಕೋಸ್ಕರ ಮಾಡತಕ್ಕ ಈ ಯೇರ್ಪಾಡುಗಳಿಗೆ ಬಹಳ ಖರ್ಚು ಹಿಡಿಯುವದು ಯಾರ ಪ್ರಯೋಜನಕ್ಕೋಸ್ಕರ ಇದೆಲ್ಲಾ ಮಾಡಲ್ಪಡುತ್ತೋ ಅವರೇ ಈ ಖರ್ಚನ್ನೆಲ್ಲಾ ವಹಿಸತಕ್ಕದ್ದು. ಈ ಬಗ್ಯೆ ಹರಿದ್ವಾರಕ್ಕಾಗಲಿ ದೇಶದಲ್ಲಿ ಸರ್ವತ್ರ ಯಿಂಥಾ ಪರಿಷೆಗಳಿಗೆ ಬರತಕ್ಕ ಯಾತ್ರೆಯ ಜನಗಳಿಗೆ ಸೇನಿಟರಿ ಟ್ಯಾಕ್ಸ್ ಯೆಂಬ ತೆರಿಗೆಯನ್ನು ವಿಧಿಸತಕ್ಕದ್ದು ನ್ಯಾಯವಾಗಿರುತ್ತೆ.

ಮೊಕ್ಕಾಂ ಸಿಂಲಾ, ೧೬ನೇ ಸೆಪಟಂಬರ ೧೮೬೭.

(Signed) JOHN MURRAY, M. D.
Inspector General of Hospitals, Upper Provinces.

PRINTED AND PUBLISHED BY J. P. GARRETT, SUPT., MYSORE GOVT. PRESS, BANGALORE—1867.